# ಸಾಮ್ರಾಟ್ ಶ್ರೇಣಿಕ ಬಿಂಬಸಾರ

ಶ್ರೀಮತಿ ಎಸ್.ಪಿ. ಶಾಂತಮ್ಮ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ಸಾಮ್ರಾಟ್ ಶ್ರೇಣಿಕ ಬಿಂಬಸಾರ

ಪ್ರಧಾನ ಸಂಪಾದಕರು
**ಪ್ರೊ|| ಎಸ್.ಜಿ. ಸಿದ್ಧರಾಮಯ್ಯ**
ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

ಸಂಪಾದಕರು
**ಡಾ| ಎಂ.ಎ. ಜಯಚಂದ್ರ**

ಲೇಖಕರು
**ಶ್ರೀಮತಿ ಎಸ್.ಪಿ. ಶಾಂತಮ್ಮ (ಧಾರಿಣಿ)**

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಸಾಮ್ರಾಟ್ ಶ್ರೇಣಿಕ ಬಿಂಬಿಸಾರ
ಲೇಖಕರು : ಶ್ರೀಮತಿ ಎಸ್.ಪಿ. ಶಾಂತಮ್ಮ (ಧಾರಿಣಿ), ಬೆಂಗಳೂರು

ಮೊದಲ ಮುದ್ರಣ : ೨೦೦೫

ಪುಟಗಳು : xii + 20

ಪ್ರತಿಗಳು : ೩೦೦೦

© ಲೇಖಕರದು

ISBN : 81-7713-188-5

ಬೆಲೆ ರೂ. ೧೦.೦೦

ಭಗವಾನ್ ಮಹಾವೀರರ ೨೬೦೦ನೆಯ ಜನ್ಮಕಲ್ಯಾಣ
ಮಹೋತ್ಸವದ ಪ್ರಕಟಣಾ ಸಮಿತಿ, ಬೆಂಗಳೂರು

೧. ಡಾ| ಎಂ.ಎ. ಜಯಚಂದ್ರ, ಅಧ್ಯಕ್ಷರು
೨. ಶ್ರೀ ಎಸ್.ಎನ್. ಅಶೋಕಕುಮಾರ್, ಸದಸ್ಯರು
೩. ಶ್ರೀ ನಾಗರಾಜ್ ಪೂವಣ್ಣಿ, ಸದಸ್ಯರು
೪. ಶ್ರೀ ಎ.ಪಿ. ಕುಮಾರ್ ಜೈನ್, ಸದಸ್ಯರು
೫. ಶ್ರೀ ಮಲ್ಲಿನಾಥ ಪಾಟೀಲ್, ಸದಸ್ಯರು
೬. ಶ್ರೀಮತಿ ವಿಮಲ ಸುಮತಿಕುಮಾರ್, ಸದಸ್ಯರು
೭. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂಚಾಲಕರು
೮. ಶ್ರೀ ಡಿ. ಸುರೇಂದ್ರ ಕುಮಾರ್, ವಿಶೇಷ ಆಹ್ವಾನಿತರು

ಪ್ರಕಾಶಕರು :
ಎನ್. ತಿಪ್ಪೇಸ್ವಾಮಿ
ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಮುದ್ರಕರು
ಶ್ರೀ ವೆಂಕಟೇಶ್ವರ ಪ್ರಿಂಟರ್ಸ್
ಗವೀಪುರ ಗುಟ್ಟಹಳ್ಳಿ, ಕೆ.ಜಿ. ನಗರ, ಬೆಂಗಳೂರು-19
ದೂರವಾಣಿ : 26677556

# ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು - ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಒಂದು ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು - ಬದುಕಿನ ಎಲ್ಲಾ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡು ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾದೇವಿಯವರ ಜ್ಞಾನ ಶಕ್ತಿ $2 \times 2 = 4$ ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹುಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ

ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು ? ಇದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು ; ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ - ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು; ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ, ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟಕಟಕಧಣ, ಮಾತು ಜ್ಯೋತಿರ್ಲಿಂಗ, ಪಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದರ್ಶಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ

ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ, ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾ ವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲಾ ಜ್ಞಾನಶಾಖೆಗಳ ಪಾರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ನ ಅಧೀನ ವಿಷಯ ಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡದ ಜ್ಞಾನಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ.

ಹಿಂದಣ ಅನಂತವನು ಮುಂದಣ ಅನಂತವನು
ಒಂದು ದಿನ ಒಳಕೊಂಡಿತ್ತು ನೋಡಾ
ಒಂದು ದಿನವನೊಳಕೊಂಡು ಮಾತನಾಡುವ ಮಹಾಂತನ
ಕಂಡು ಬಲ್ಲವರಾರಯ್ಯ

ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಈ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು, ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ,

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನ ಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಗಣಕೀಕರಣದ ಏಕಾಧಿಪತ್ಯಕ್ಕಿಂತ ಬಹುರೂಪಿ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ

ಶಬ್ದರೂಪಗಳು: ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ - ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು, ಹಾಗೂ ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

ಜೈನಧರ್ಮಕ್ಕೆ ಐದುಸಾವಿರ ವರ್ಷಗಳ ಪ್ರಾಚೀನ ಇತಿಹಾಸವಿದೆ. ತಾನು ಬೋಧಿಸಿದ ಅಹಿಂಸೆ ಅಪರಿಗ್ರಹನೀತಿ ಸಮ್ಯಕ್‌ತತ್ವ ಹಾಗೂ ಅನೇಕಾಂತವಾದಗಳ ಪ್ರತಿಪಾದನೆಯ ಮುಖೇನ ಈ ನೆಲದ ಜೀವನಗತಿಯ ಮೇಲೆ ಅಪಾರ ಪರಿಣಾಮವನ್ನು ಉಂಟುಮಾಡಿದ ಧರ್ಮವಿದು. ಕನ್ನಡ ಸಾಹಿತ್ಯದ ಮಟ್ಟಿಗಂತೂ ಜೈನಧರ್ಮದ ಪ್ರಭಾವ ಪ್ರೇರಣೆಗಳು ನಖಮಾಂಸಭಾವದ ನೆಲೆಯವು. ಕನ್ನಡ ನೆಲದಲ್ಲಿ ನಡೆದ ಹಲವು ಧಾರ್ಮಿಕ ಸಂಘರ್ಷಗಳ ಮುಖಾಮುಖಿತ್ವದಲ್ಲಿ ಜೈನಧರ್ಮದ ಏಳುಬೀಳುಗಳು ಕನ್ನಡ ಸಂಸ್ಕೃತಿಯ ಜೀವನೇತಿಹಾಸವನ್ನು ಪ್ರತಿಬಿಂಬಿಸುವುದೇ ಆಗಿದೆ.

ಭಗವಾನ್ ಮಹಾವೀರರ ೨೬೦೦ನೆಯ ಜನ್ಮಕಲ್ಯಾಣ ಮಹೋತ್ಸವದ ಅಂಗವಾಗಿ ಜೈನಧರ್ಮಕ್ಕೆ ಸಂಬಂಧಿಸಿದ ಕೆಲವು ವಿಚಾರಗಳ ಪುಸ್ತಿಕೆಗಳನ್ನು

ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಸಮಣಸುತ್ತಂ, ಅನೇಕಾಂತವಾದ, ಅಹಿಂಸೆ, ಹೇಮಚಂದ್ರ, ಮಹಾವೀರವಾಣಿ, ಸಾಮ್ರಾಟ್ ಶ್ರೇಣಿಕ ಬಿಂಬಸಾರ, ಮಹಾಪುರಾಣ, ಕುಂದಾಕುಂದಾಚಾರ್ಯ, ಚಂದನಾಂಬಿಕೆ - ಇವೇ ಈ ಪುಸ್ತಿಕೆಗಳು. ಧಾರ್ಮಿಕ ವಿಚಾರಗಳು ಕೇವಲ ಪಂಡಿತಮಾನ್ಯರ ಜಿಜ್ಞಾಸೆಯ ವಿಚಾರಗಳಾಗಿ ಮಾತ್ರ ಉಳಿಯದೆ ಶ್ರೀಸಾಮಾನ್ಯರ ಅರಿವಿಗೆ ಅನ್ನವಾಗಬೇಕು ಎಂಬುದು ಇಂಥ ಪ್ರಕಟಣೆಯ ಹಿಂದಿನ ಉದ್ದೇಶ.

ಭಗವಾನ್ ಮಹಾವೀರರ ೨೬೦೦ ನೆಯ ಜನ್ಮಕಲ್ಯಾಣ ಮಹೋತ್ಸವದ ರಾಜ್ಯ ಸಮಿತಿಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಅಪೇಕ್ಷೆಗೆ ಅನುಸಾರವಾಗಿ ಈ ಪ್ರಕಟಣಾಕಾರ್ಯ ನಡೆಯುತ್ತಿದೆ. ಸಂಪಾದಕ ಮಂಡಳಿಯವರು ವಿಷಯಗಳ ಆಯ್ಕೆ ಮಾಡಿ, ವಿಷಯತಜ್ಞರಿಂದ ಬರೆಸುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಪ್ರಧಾನ ಸಂಪಾದಕರಾಗಿ ಡಾ|| ಎಂ.ಎ. ಜಯಚಂದ್ರ ಅವರು ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಈ ಎಲ್ಲ ಮಹನೀಯರಿಗೆ ಕನ್ನಡ ಪುಸ್ತಕ ಪ್ರಾಧಿಕಾರವು ಆತ್ಮೀಯ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ದಿನಾಂಕ : ೮-೯-೨೦೦೫ — ಪ್ರೊ|| ಎಸ್.ಜಿ. ಸಿದ್ಧರಾಮಯ್ಯ

ಸ್ಥಳ : ಬೆಂಗಳೂರು — ಅಧ್ಯಕ್ಷರು

# ಮುನ್ನುಡಿ

ಭಗವಾನ್ ಮಹಾವೀರ ಕಾಲದಲ್ಲಿದ್ದ ಮಗಧ ದೇಶದ ಬಲಿಷ್ಠ ಮಹಾರಾಜ - ಸಾಮ್ರಾಟ ಶ್ರೇಣಿಕ ಬಿಂಬಸಾರ. ಕ್ರಿ.ಪೂ. ೬೦೩ ರಿಂದ ೫೫೧ ರವರೆಗೆ ರಾಜಗೃಹದಿಂದ ರಾಜ್ಯವಾಳಿದ. ಜೈನ, ಬೌದ್ಧ, ಬ್ರಾಹ್ಮಣ ಸಾಹಿತ್ಯದಲ್ಲಿ ಈತನ ಬಗ್ಗೆ ಮಾಹಿತಿ ದೊರೆಯುತ್ತದೆ. ಎರಡು ಬಾರಿ ಗೌತಮ ಬುದ್ಧನನ್ನು ಭೇಟಿಯಾಗಿದ್ದ. ಚೇಳಿನಿ ಮಹಾರಾಣಿಯಿಂದ ಜಿನಧರ್ಮಾವಲಂಬಿಯಾದ. ಭಾರತೀಯ ಜೈನ ಸಾಹಿತ್ಯದಲ್ಲಿ ಶ್ರೇಣಿಕ ಹಾಗೂ ಅವನ ಪರಿವಾರದ ಬಗ್ಗೆ ವಿಪುಲವಾದ ಮಾಹಿತಿ ದೊರೆಯುತ್ತದೆ. ಮಹಾವೀರರ ಧರ್ಮಸಭೆಯ ಪ್ರಮುಖ ಶ್ರೋತೃವಾಗಿದ್ದ. ಭವಿಷ್ಯತ್ಕಾಲದ ಪ್ರಥಮ ತೀರ್ಥಂಕರನಾಗುತ್ತಾನೆಂಬ ವಿಷಯ ಜೈನ ಪರಂಪರೆಯಲ್ಲಿ ದಾಖಲಾಗಿದೆ.

ಕನ್ನಡದ ವರ್ಧಮಾನ ಪುರಾಣಗಳಲ್ಲಿ, ವಡ್ಡಾರಾಧನೆ, ಪುಣ್ಯಾಸ್ರವ ಚಂಪೂ, ರಾಜಾವಳಿ ಕಥೆ ಹಾಗೂ ನೋಂಪಿ ಕಥೆಗಳಲ್ಲಿ ಶ್ರೇಣಿಕನ ಕಥೆಗಳು ಲಭಿಸುತ್ತವೆ. ಕ್ರಿ.ಶ. ೧೪೪೪ರಲ್ಲಿ ಜಿನದೇವಣ್ಣನು 'ಶ್ರೇಣಿಕ ಚರಿತೆ' ಎಂಬ ಸಾಂಗತ್ಯ ಕೃತಿ ರಚಿಸಿದ್ದಾನೆ. ಅಲ್ಲೆಲ್ಲ ಶ್ರೇಣಿಕ, ಆತನ ಪತ್ನಿ ನಂದಶ್ರೀ, ಇವರ ಪುತ್ರ ಅಭಯಕುಮಾರನ ಬುದ್ಧಿವಂತಿಕೆ ಪ್ರಕಟಗೊಂಡಿದೆ. ರಾಣಿ ಚೇಳಿನಿಯಿಂದ ಶ್ರೇಣಿಕ ಜಿನಧರ್ಮಾವಲಂಬಿಯಾದುದು ವ್ಯಕ್ತವಾಗಿದೆ. ಇವೆಲ್ಲ ಶ್ರೇಣಿಕನ ಐತಿಹಾಸಿಕ ಸಂಗತಿಗಳ ಜೊತೆಗೆ ಆತನ ಹಾಗೂ ಆತನ ಪರಿವಾರದವರ ಆಧ್ಯಾತ್ಮಿಕ ಸಾಧನೆ, ಸಿದ್ಧಿಗಳು ನಿರೂಪಿತವಾಗಿವೆ.

ಜನ್ಮ ಕಲ್ಯಾಣ ಮಹೋತ್ಸವದ ರಾಜ್ಯ ಸಮಿತಿಯ ಅಧ್ಯಕ್ಷರೂ, ಸನ್ಮಾನ್ಯ ಗೃಹಸಚಿವರೂ ಆದ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರ ಆಶಯದಂತೆ ಶ್ರೀ ಸಾಮಾನ್ಯರಿಗೆ ಜೈನ ಮಹಾಪುರುಷರನ್ನು ಪರಿಚಯಿಸುವ ದೃಷ್ಟಿಯಿಂದ ಶ್ರೇಣಿಕನ ಬಗ್ಗೆ ಕಿರು ಪುಸ್ತಕವನ್ನು ತರಲು ಪ್ರಕಟಣಾ ಸಮಿತಿ ನಿರ್ಧರಿಸಿತು.

ವಯೋವೃದ್ಧರಾದ ಶ್ರೀಮತಿ ಶಾಂತಮ್ಮ (ಧಾರಿಣಿ) ಅವರು ಕಾದಂಬರಿಕಾರರಾಗಿ, ಕತೆಗಾರರಾಗಿ, ನಾಟಕಕಾರರಾಗಿ ಜನಪ್ರಿಯರಾಗಿದ್ದಾರೆ. ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇಂಥವರು ನಮ್ಮ ಸಮಿತಿಯ ಕರೆಯನ್ನು ಮನ್ನಿಸಿ ಈ ಕೃತಿಯನ್ನು ಬಹುಬೇಗನೆ ಬರೆದು ಕೊಟ್ಟಿದ್ದಾರೆ. ಇವರಿಗೆ ಸಮಿತಿಯು ಆಭಾರಿಯಾಗಿದೆ.

ಡಾ. ಎಂ.ಎ. ಜಯಚಂದ್ರ

ಅಧ್ಯಕ್ಷರು

ಭಗವಾನ್ ಮಹಾವೀರರ ೨೬೦೦ನೆಯ ಜನ್ಮ ಕಲ್ಯಾಣ

ಮಹೋತ್ಸವದ ಪ್ರಕಟಣಾ ಸಮಿತಿ, ಬೆಂಗಳೂರು

# ಸಾಮ್ರಾಟ್ ಶ್ರೇಣಿಕ ಬಿಂಬಸಾರ

ಪ್ರಾಚೀನ ಕಾಲದಲ್ಲಿ ದಕ್ಷಿಣ ಬಿಹಾರದ ಪಾಟ್ನಾ ಮತ್ತು ಗಯಾ ಜಿಲ್ಲೆಗಳನ್ನು 'ಮಗಧ' ಎಂದು ಕರೆಯುತ್ತಿದ್ದರು. ಇದನ್ನು ಆಳಿದ ರಾಜರಲ್ಲಿ ಸಾಮ್ರಾಟ್ ಶ್ರೇಣಿಕನು ಪ್ರಸಿದ್ಧನಾದವನು. ಈತನನ್ನು ಬಿಂಬಸಾರನೆಂದೂ ಕರೆಯುತ್ತಿದ್ದರು. ಶ್ವೇತಾಂಬರ ಗ್ರಂಥಗಳಲ್ಲಿ ಬಿಂಬಸಾರನೆಂದೇ ಉಲ್ಲೇಖವಾಗಿದೆ.

ಶ್ರೇಣಿಕ ಬಿಂಬಸಾರನ ತಂದೆಯ ಹೆಸರು ಪ್ರಸೇನಜಿತ. ಈತನಿಗೆ ಉಪಶ್ರೇಣಿಕ ಎಂಬ ಇನ್ನೊಂದು ಹೆಸರೂ ಇದ್ದಿತು. ಕುಶಾಗ್ರಪುರದಿಂದ ರಾಜ್ಯವಾಳುತ್ತಿದ್ದ. ಈತನಿಗೆ ಮೂವತ್ತೆರಡು ಮಂದಿ ರಾಣಿಯರು. ಇಂದ್ರಾಣಿಯು ಪಟ್ಟದರಸಿ. ನೂರ್ವರು ಗಂಡು ಮಕ್ಕಳು. ಇಂದ್ರಾಣಿಯ ಮಗ ಶ್ರೇಣಿಕ.

ರಾಣಿಯರಲ್ಲಿ ಯಮದಂಡನೆಂಬ ರಾಜ್ಯಭ್ರಷ್ಟ ರಾಜನ ಮಗಳು ತಿಲಕಾವತಿಯೂ ಒಬ್ಬಳು. ಒಂದು ದುರ್ಬಲ ಗಳಿಗೆಯಲ್ಲಿ ಆಕೆಯ ಮಗನಿಗೇ ಪಟ್ಟಕಟ್ಟುವುದಾಗಿ ರಾಜ ಮಾತುಕೊಟ್ಟು ಬಿಟ್ಟಿದ್ದ. ತಿಲಕಾವತಿಗೆ ಚಿಲಾತ ಎಂಬ ಮಗ ಹುಟ್ಟಿದ. ಇಷ್ಟು ಜನ ಮಕ್ಕಳಲ್ಲಿ ಹಿರಿಯ ಮಗ ಶ್ರೇಣಿಕನು ಎಲ್ಲವಿಧದಲ್ಲೂ ಪಟ್ಟಕ್ಕೆ ಅರ್ಹನಾಗಿದ್ದ. ಆದರೂ, ಉಪಶ್ರೇಣಿಕನು ತನ್ನ ಮಕ್ಕಳಲ್ಲಿ ಹಲವು ಪರೀಕ್ಷೆಗಳನ್ನಿಟ್ಟ.

ಮಿಠಾಯಿ ತುಂಬಿದ ಬುಟ್ಟಿಗಳನ್ನೂ, ನೀರು ತುಂಬಿದ ಹಸಿ ಮಣ್ಣಿನ ಗಡಿಗೆಗಳನ್ನೂ ಒಂದು ಕಡೆ ಇರಿಸಿದ್ದರು. ಅವುಗಳ ಬಾಯಿಯನ್ನು ಭದ್ರವಾಗಿ

ಮುಚ್ಚಲಾಗಿತ್ತು. ಮಕ್ಕಳನ್ನೆಲ್ಲ ಕರೆಸಿದ ರಾಜ, "ಮುಚ್ಚಳಗಳನ್ನು ತೆರೆಯದೆ ಮಿಠಾಯಿ ತಿಂದು ನೀರು ಕುಡಿಯಬೇಕು !" ಎಂದ. ಉಳಿದ ಮಕ್ಕಳೆಲ್ಲಾ ಏನೂ ತೋಚದೆ ಸುಮ್ಮನಿದ್ದಾಗ ಶ್ರೇಣಿಕನು ಬುಟ್ಟಿಗಳನ್ನು ಬಲವಾಗಿ ಅಲ್ಲಾಡಿಸಿದ, ಮಿಠಾಯಿಗಳು ಪುಡಿಪುಡಿಯಾಗಿ ಬುಟ್ಟಿಯ ಸಂದಿನಿಂದ ಉದುರಿದವು. ಮಣ್ಣಿನ ಗಡಿಗೆಗಳಾದುದರಿಂದ ಆ ಬಟ್ಟೆಯು ನೀರನ್ನು ಹೀರಿತು. ಹೊಟ್ಟೆತುಂಬ ಮಿಠಾಯಿ ತಿಂದು ನೀರು ಕುಡಿದ.

ಹೀಗೆಯೇ ಇನ್ನೂ ಅನೇಕ ಪರೀಕ್ಷೆಗಳಲ್ಲಿ ಶ್ರೇಣಿಕ ಗೆದ್ದ. ಒಮ್ಮೆ ನಸುಕಿನಲ್ಲಿ ಕೃತಕವಾದ ಬೆಂಕಿಯನ್ನು ಎಬ್ಬಿಸಲಾಯಿತು. ಉಳಿದವರೆಲ್ಲ ದಿಕ್ಕೆಟ್ಟು ಓಡುತ್ತಿರುವಾಗ ಶ್ರೇಣಿಕನು ಮಾತ್ರ ಸಿಂಹಾಸನ, ರಾಜದಂಡ, ಧ್ವಜ, ಛತ್ರಿ ಇವುಗಳನ್ನು ಹೊತ್ತು ಅರಮನೆಯಿಂದ ಕ್ಷೇಮವಾಗಿ ಹೊರಗೆ ಬಂದ. ಇವನ್ನೆಲ್ಲ ಕಂಡ ಪ್ರಜೆಗಳು, ಪರಿವಾರದ ಹಿರಿಯರು ಶ್ರೇಣಿಕನೇ ರಾಜ್ಯಕ್ಕೆ ತಕ್ಕವನೆಂದು ನಿರ್ಧರಿಸಿದರು. ಆದರೆ ಉಪಶ್ರೇಣಿಕನಿಗೆ ತನ್ನ ಮಾತನ್ನು ಉಳಿಸಿಕೊಳ್ಳುವುದರ ಜೊತೆಗೆ ದಯಾದಿ ಮತ್ಸರದಿಂದ ಶ್ರೇಣಿಕನನ್ನು ರಕ್ಷಿಸಬೇಕಾಗಿತ್ತು. ಅದಕ್ಕಾಗಿ, "ನೀನು ಗುಪ್ತವಾಗಿ ಸೈನ್ಯ ಸಂಗ್ರಹ ಮಾಡುತ್ತಿದ್ದೀಯೆ. ನನ್ನನ್ನು ಮೂಲೆಗೊತ್ತಿಸಿ ರಾಜ್ಯವಾಳುವ ಸಂಚು ನಡೆಸಿರುವೆ" ಎಂದು ಸುಳ್ಳು ಅಪಾದನೆ ಹೊರಿಸಿ ರಾಜ್ಯ ಬಿಟ್ಟು ಹೋಗುವಂತೆ ಆಜ್ಞೆಮಾಡಿದ.

ಒಮ್ಮೆಗೇ ಅಪ್ಪಳಿಸಿದ ಆಘಾತದಿಂದ ಹತಾಶನಾದ ಶ್ರೇಣಿಕ, ಹತ್ತಿರದ ನಂದಿಗ್ರಾಮಕ್ಕೆ ಬಂದ. ಆದರೆ ತಂದೆಯ ಬೇಹುಗಾರರು ಅಲ್ಲಿಗೂ ಬಂದು ಅಲ್ಲಿನವರಿಂದ ಶ್ರೇಣಿಕನು ಅವಮಾನಿತನಾಗುವಂತೆ ಮಾಡಿದರು. ದಾಯಾದಿಗಳಿಂದ ತನ್ನ ಮಗನು ಆದಷ್ಟು ದೂರ ಹೋಗಿ ಕ್ಷೇಮವಾಗಿರಲಿ ಎಂಬ ಆಶಯ ಹೆತ್ತ ತಂದೆಯದು. ಇದಾವುದನ್ನೂ ಅರಿಯದ ಶ್ರೇಣಿಕನು ಮಾತ್ರ ನಂದಿಗ್ರಾಮದವರ ಮೇಲೆ ಎಂದಾದರೂ ಸೇಡು ತೀರಿಸುವ ಛಲತೊಟ್ಟ.

ಮುಂದೆ ಶ್ರೇಣಿಕನ ಪ್ರಯಾಣದಲ್ಲಿ ಇಂದ್ರದತ್ತನೆಂಬುವನು ಜೊತೆಯಾದ. ಆತ ವೇಣಾತಟಾಕ ನಗರದ ಶ್ರೇಷ್ಠಿ. ಶ್ರೇಣಿಕನು ಆತನನ್ನು 'ಮಾವ' ಎಂದು ಸಂಬೋಧಿಸಿದ. ಇಂದ್ರದತ್ತನಿಗೆ ಆಶ್ಚರ್ಯವಾಯಿತು. 'ಮಾವ ಬೇಸರವಾಗದಂತೆ ನಾಲಗೆ ಬಂಡಿಯನ್ನೇರಿ ಹೋಗೋಣವೆ?' ಎಂದು ತನ್ನ ಸಹಪ್ರಯಾಣಿಕ ಕೇಳಿದಾಗ ಈತ ನಿಜವಾಗಿಯೂ ಅರೆ ಮರುಳನಿರಬೇಕೆಂದು ತರ್ಕಿಸಿದ. ಹೀಗೆಯೇ ಪ್ರಯಾಣದಲ್ಲಿ ಶ್ರೇಣಿಕನು ಕೇಳಿದಪ್ರಶ್ನೆಗಳೆಲ್ಲಾ ಆತನಿಗೆ ಅಸಂಬದ್ಧವಾಗಿಯೇ ಕಂಡುವು. ಹೆಚ್ಚುಮಾತಿಲ್ಲದೆ ಊರು ಸೇರಿದರು. ಶ್ರೇಣಿಕನನ್ನು ಛತ್ರದಲ್ಲಿರಿಸಿ ತಾನು ಮನೆಗೆ ಹೋದ.

ಇಂದ್ರದತ್ತನ ಮಗಳು ನಂದಶ್ರೀ, ಅವಳೊಡನೆ ಶ್ರೇಣಿಕನ ಮಾತುಗಳನ್ನೆಲ್ಲಾ ಹೇಳಿದ. ಆಕೆ, 'ಅಪ್ಪಾಜಿ! ಆತ ಮರುಳನಲ್ಲ, ಮಹಾ ಬುದ್ಧಿಶಾಲಿ! 'ಮಾವ', ಎಂದು ನಿಮ್ಮನ್ನು ಸಂಬೋಧಿಸಿದುದರ ಅರ್ಥ, ತಾನು ಒಳ್ಳೆಯ ಕುಲದವನೆಂಬುದು. 'ನಾಲಗೆ ಬಂಡಿ', ಎಂದರೆ ಮಾತನಾಡುತ್ತಾ ಹೋಗುವಾ, ಎಂಬ ಅರ್ಥ. ಉಳಿದ ಆತನ ಪ್ರಶ್ನೆಗಳಿಗೆಲ್ಲಾ ಸಮಂಜಸವಾದ ಉತ್ತರ ಹೇಳಿದಳು. ತಂದೆಯ ಅಪ್ಪಣೆ ಪಡೆದು ಶ್ರೇಣಿಕನನ್ನು ಕರೆತರಲು ಸೇವಕಿಯನ್ನು ಕಳುಹಿಸಿದಳು.

ಸೇವಕಿಯು ತನ್ನ ಉಗುರುಗಳಲ್ಲಿ ಎಣ್ಣೆಯನ್ನು ತುಂಬಿ ಶ್ರೇಣಿಕನ ಬಳಿ ಬಂದು, 'ಸ್ವಾಮೀ! ಈ ಎಣ್ಣೆಯನ್ನು ಹಚ್ಚಿಕೊಂಡು ಅಭ್ಯಂಜನ ಮಾಡಿ ಬರಬೇಕೆಂದು ನಮ್ಮ ಒಡತಿ ಹೇಳಿದ್ದಾರೆ'-ಎಂದಳು.

ಶ್ರೇಣಿಕ ನಸುನಕ್ಕು ಕಾಲಬೆರಳಿನಿಂದ ನೆಲವನ್ನು ಕೆರೆದು-ಗುಳಿ ಮಾಡಿದ. ಅದರಲ್ಲಿ ನೀರನ್ನು ತುಂಬಿ ಎಣ್ಣೆಯನ್ನು ಅದರಲ್ಲಿ ಹಾಕುವಂತೆ ಹೇಳಿದ. ಆಕೆ ಹಿಂತಿರುಗುವಾಗ, 'ತಾಯೀ, ಮನೆಯ ಗುರುತು ಹೇಳಲಿಲ್ಲವಲ್ಲಾ?' ಎಂದ. ಸೇವಕಿಯು ತನ್ನ ಕಿವಿಯನ್ನು ಮುಟ್ಟಿ ತೋರಿಸಿ ಹೊರಟುಹೋದಳು. ಅದರಿಂದ ಮನೆಯ ಮುಂದೆ ತಾಳೆಯ ಮರವಿರುವುದೆಂದು ಅರ್ಥಮಾಡಿಕೊಂಡ. ನಂದಶ್ರೀ-ಶ್ರೇಣಿಕರ ಮಧ್ಯೆ ಹಲವು ತೆರದ ಬುದ್ಧಿ

ಪರೀಕ್ಷೆಗಳು ನಡೆದುವು. ಅವೆಲ್ಲ ಬಹಳ ಸೊಗಸಾಗಿವೆ. ಶ್ರೇಣಿಕನ ಚತುರತೆಗೆ ಮೆಚ್ಚಿದ ಇಂದ್ರದತ್ತ ನಂದಶ್ರೀಯನ್ನು ಆತನಿಗಿತ್ತು ವಿವಾಹ ಮಾಡಿದ.

ನಂದಶ್ರೀ ಗರ್ಭಿಣಿಯಾದಳು. ಆಕೆಗೆ ಯಾವುದೇ ಪ್ರಾಣಿಗಳೂ ಹಿಂಸೆಯಾಗದಂತಹ ಅಭಯ ಘೋಷಣೆಯನ್ನು ಮಾಡಿಸಬೇಕೆಂಬ ಬಯಕೆಯುಂಟಾಯಿತು. ಅಂತಹ ಆಜ್ಞೆಯು ರಾಜರು ಮಾಡುವಂತಹುದು. ಇದಕ್ಕಾಗಿ ಶ್ರೇಣಿಕನಿಗೆ ತನ್ನ ಪರಿಸ್ಥಿತಿಯನ್ನು ನೆನೆದು ಚಿಂತೆಯಾಯಿತು. ಅದೇ ಸಮಯ ವಸುಪಾಲ ರಾಜರ ಪಟ್ಟದಾನೆಗೆ ಮದವೇರಿ ನಗರದಲ್ಲೆಲ್ಲ ಗಲಭೆಯೆಬ್ಬಿಸುತ್ತಿತ್ತು. ಜನ ದಿಕ್ಕೆಟ್ಟು ಓಡುತ್ತಿದ್ದರು. ಶ್ರೇಣಿಕನು ಅದರ ಬಳಿ ಹೋಗಿ ಚತುರತೆಯಿಂದ ಅದನ್ನು ಶಾಂತಪಡಿಸಿದನು. ಮಹಾರಾಜನು, 'ನಿನಗೆ ಏನುಬೇಕು?' ಎಂದು ಕೇಳಿದಾಗ, 'ಏಳು ದಿನಗಳವರೆಗೆ ಪಟ್ಟಣದಲ್ಲಿ ಅಭಯ ಘೋಷಣೆಯಾಗಲಿ' ಎಂದ ಶ್ರೇಣಿಕ. ಸಂತೋಷದಿಂದ ಹಾಗೆ ಆಜ್ಞೆ ಹೊರಡಿಸಿದ ಮಹಾರಾಜ ಶ್ರೇಣಿಕನನ್ನು ಸನ್ಮಾನಿಸಿದ.

ನಂದಶ್ರೀಯ ಬಯಕೆ ತೀರಿ ಆಕೆ ಗಂಡು ಮಗುವನ್ನು ಹೆತ್ತಳು. ಮಗುವಿಗೆ ಅಭಯಕುಮಾರನೆಂದು ಹೆಸರಿಟ್ಟರು. ಶ್ರೇಣಿಕನನ್ನು ಮೆಚ್ಚಿಕೊಂಡ ರಾಜ ವಸುಪಾಲನು ತನ್ನ ಮಗಳು ವಸುಮಿತ್ರೆಯನ್ನು ಆತನಿಗೆ ವಿವಾಹ ಮಾಡಿಕೊಟ್ಟನು.

ಕೇರಳದ ರಾಜಮೃಗಾಂಕನು ತನ್ನ ಮಗಳು ವಿಲಾಸವತಿಯನ್ನು ಶ್ರೇಣಿಕನಿಗಿತ್ತನು.

ಅತ್ತ ಉಪಶ್ರೇಣಿಕನಿಗೆ ವೈರಾಗ್ಯ ಬಂದಿತು. ಚಿಲಾತ ಪುತ್ರನಿಗೆ ಪಟ್ಟಗಟ್ಟಿ ತಾನು ತಪಸ್ವಿಯಾದ. ಚಿಲಾತನಿಗೆ ರಾಜ್ಯವಾಳುವ ಸಾಮರ್ಥ್ಯವಿರಲಿಲ್ಲ. ರಾಜ್ಯದಲ್ಲಿ ಅರಾಜಕತೆಯುಂಟಾಯಿತು. ಪ್ರಜೆಗಳು ರೋಸಿಹೋದರು. ಮಂತ್ರಿಗಳು ಆಲೋಚಿಸಿ ಕಾಂಚೀಪುರದಲ್ಲಿದ್ದ ಶ್ರೇಣಿಕನಿಗೆ 'ಬಂದು ರಾಜ್ಯವನ್ನು ವಹಿಸಿಕೊಳ್ಳುವಂತೆ' ಹೇಳಿ ಕಳುಹಿಸಿದರು. ಶ್ರೇಣಿಕನು ದಂಡನ್ನು

ಕೂಡಿಸಿಕೊಂಡು ಹೊರಟ. ಈ ವಾರ್ತೆಯನ್ನು ಕೇಳಿದ ಚಿಲಾತ ಪುತ್ರನು ವೈರಾಗ್ಯ ತಾಳಿ ದೀಕ್ಷಿತನಾಗಿ ಕಠಿಣ ತಪಸ್ಸಿನಲ್ಲಿ ನಿರತನಾದ.

ಶ್ರೇಣಿಕನು ಮಗಧದ ಪಟ್ಟಾಭಿಷಿಕ್ತ ದೊರೆಯಾದನು. ಪ್ರಜೆಗಳು ನೆಮ್ಮದಿಯನ್ನು ಕಂಡರು. ರಾಜ್ಯದ ಸುವ್ಯವಸ್ಥೆಯ ಕಡೆಗೆ ಗಮನಹರಿಸಿದ ಶ್ರೇಣಿಕ ತನ್ನ ರಾಣಿಯರನ್ನೆಲ್ಲ ಕರೆಸುವ ವ್ಯವಸ್ಥೆ ಮಾಡಿದ. ನಂದಿಗ್ರಾಮದವರು ಮಾಡಿದ ಅವಹೇಳನೆ ಮನಸ್ಸಿನಿಂದ ಮಾಸಿರಲಿಲ್ಲ. ಅವರಿಗೆ ತಕ್ಕ ಬುದ್ಧಿಕಲಿಸಬೇಕೆಂದು ಕಠಿಣ ಸಮಸ್ಯೆಯನ್ನು ಒಡ್ಡಿದ.

ಒಂದು ಕೊಬ್ಬಿದ ಹುಂಜವನ್ನು ನಂದಿಗ್ರಾಮಕ್ಕೆ ರಾಜಭಟರು ತಂದರು. 'ಇದೊಂದರಿಂದಲೇ ಕಾಳಗವಾಡಿಸಬೇಕು, ಇಲ್ಲವಾದರೆ, ಅಗ್ರಹಾರವು ನಾಶವಾಗುತ್ತದೆ' ಎಂದ ರಾಜಭಟರ ಮಾತಿನಿಂದ ಅಲ್ಲಿನವರು ಭೀತಿಯಿಂದ ಕಂಗೆಟ್ಟರು. ಆಗ, ನಂದಶ್ರೀ ಮತ್ತು ಅಭಯ ಕುಮಾರರೊಡನೆ ಇಂದ್ರದತ್ತನು ಅಲ್ಲಿಗೆ ಬಂದ. ಅವರ ಸಮಸ್ಯೆಯನ್ನು ಬಾಲಕ ಅಭಯಕುಮಾರ ಕೇಳಿದ. ಉಪಾಯವನ್ನೂ ಸೂಚಿಸಿದ. ಬಯಲಿನಲ್ಲಿ ಒಂದು ದೊಡ್ಡ ನಿಲುಗನ್ನಡಿಯನ್ನು ಇಡಲಾಯಿತು. ಹುಂಜವನ್ನು ಬಿಟ್ಟರು. ತನ್ನದೇ ಪ್ರತಿಬಿಂಬವನ್ನು ಪ್ರತಿಸ್ಪರ್ಧಿ, ಎಂದು ಭಾವಿಸಿದ ಹುಂಜ ಕನ್ನಡಿಯ ಮೇಲೆ ಬಿದ್ದು ಕುಕ್ಕಿ ಕಾಳಗವಾಡಿತು. ಇದನ್ನು ನೋಡುತ್ತಿದ್ದ ರಾಜ ಭಟರು ಶ್ರೇಣಿಕನಿಗೆ ನಡೆದುದನ್ನು ತಿಳಿಸಿದರು. ಶ್ರೇಣಿಕ ಇನ್ನೂ ಸಮಸ್ಯೆಗಳನ್ನು ಒಡ್ಡಿದ. ಅಭಯ ಕುಮಾರನ ಸೂಚನೆಯಂತೆ ಅವೆಲ್ಲಪಂಥಗಳಲ್ಲಿಯೂ ಅಗ್ರಹಾರದವರು ಗೆದ್ದರು. ಅವರಿಗೆ ಸೂಚನೆ ಕೊಡುತ್ತಿರುವವನು ತನ್ನ ಮಗನೇ ಎಂದು ಶ್ರೇಣಿಕನಿಗೆ ತಿಳಿಯಿತು. ಸಂತೋಷದಿಂದ ಬರಮಾಡಿಕೊಂಡ. ಮಗನ ಬೇಡಿಕೆಯಂತೆ ನಂದಿಗ್ರಾಮದವರ ಮೇಲಿನ ಕೋಪವನ್ನು ಬಿಟ್ಟು ಉಡುಗೊರೆ ಕೊಟ್ಟುಕಳುಹಿಸಿದ.

ರಾಜಧಾನಿಯು ಪರ್ವತದ ಮೇಲಿದ್ದುದರಿಂದ ಜನರು ನಿತ್ಯದ ವಹಿವಾಟುಗಳಿಗೆ ತೊಂದರೆಯಾಗುತ್ತಿತ್ತು. ಶ್ರೇಣಿಕನು ಆ ಪರ್ವತದ

ತಪ್ಪಲಿನಲ್ಲಿಯೇ ಹೊಸ ನಗರವನ್ನು ನಿರ್ಮಿಸಿ ರಾಜಗೃಹವೆಂದು ಹೆಸರು ಕೊಟ್ಟ. ಬಲವಾದ ಕೋಟೆ ಕೊತ್ತಲುಗಳಿಂದ ಪಟ್ಟಣವನ್ನು ದುರ್ಭೇದ್ಯವನ್ನಾಗಿ ಮಾಡಿದ. ಅಂಗರಾಜ ಬ್ರಹ್ಮದತ್ತನನ್ನು ಸೋಲಿಸಿ ಆ ರಾಜ್ಯವನ್ನು ವಶಪಡಿಸಿಕೊಂಡ. ಸುತ್ತಲಿನ ಚಿಕ್ಕ-ಪುಟ್ಟ ರಾಜರನ್ನು ಗೆದ್ದು ರಾಜ್ಯವನ್ನು ವಿಸ್ತರಿಸಿದ. ವಿವಾಹ ಸಂಬಂಧದ ಮೂಲಕ ಹಲವು ರಾಜರ ಸ್ನೇಹವನ್ನು ಗಳಿಸಿದ. ವಾಸವಿ ಹಾಗೂ ಮದ್ರರಾಜನ ಮಗಳು ಖೇಮಾ ಇವರ ಜೊತೆಯ ವಿವಾಹವು ಶ್ರೇಣಿಕನ ರಾಜ್ಯಕ್ಕೆ ಬಲವನ್ನು ಕೊಟ್ಟವು. ಅವನ ಘನತೆ ಗೌರವಗಳು ಇದರಿಂದ ಹೆಚ್ಚಿದುವು. ಕೋಸಲದ ಅರಸ ಪ್ರಸೇನಜಿತನ ತಂಗಿ ಕೋಸಲಾದೇವಿಯನ್ನು ವಿವಾಹವಾದುದರಿಂದ ಕಾಶಿಯ ಅಪಾರ ಸಂಪತ್ತು ದೊರೆಯಿತು. ಆತನ ಪ್ರಜೆಗಳು ಶ್ರೀವಂತರೂ, ಸುಖಿಗಳೂ ಚಟುವಟಿಕೆಯುಳ್ಳವರೂ ಆಗಿದ್ದರು. 'ಪ್ರಜೆಗಳ ಸುಖವೇ ತನ್ನ ಸುಖ', ಎಂದು ಭಾವಿಸಿದ ರಾಜ ಅದಕ್ಕಾಗಿ ಶ್ರಮಪಡುತ್ತಿದ್ದ. ಇಷ್ಟಾದರೂ ಅವನಿಗೆ ಜೈನಧರ್ಮದ ಮೇಲೆ ತಿರಸ್ಕಾರವಿತ್ತು.

ಅಭಯಕುಮಾರನು ಬಹು ಬುದ್ಧಿಶಾಲಿ, ರಾಜ್ಯವಾಳಲು ಬೇಕಾದ ಎಲ್ಲಾ ಅರ್ಹತೆಗಳೂ ಅವನಲ್ಲಿದ್ದುವು. ಅದನ್ನು ಗ್ರಹಿಸಿದ ಶ್ರೇಣಿಕನು ಅವನಿಗೆ ಯುವರಾಜ ಪಟ್ಟವನ್ನು ಕಟ್ಟಿದನು.

ರಾಜಗೃಹದಲ್ಲಿ ವಸುಮಿತ್ರನೆಂಬ ಶೆಟ್ಟಿಯಿದ್ದ. ಆತನಿಗೆ ಇಬ್ಬರು ಹೆಂಡಿರು, ವಸುಮಿತ್ರೆ ಮತ್ತು ಸುಮಿತ್ರೆ. ಸುಮಿತ್ರೆಗೆ ಒಂದು ಗಂಡು ಮಗು. ಅದನ್ನು ಇಬ್ಬರೂ ಪ್ರೀತಿಯಿಂದ ಸಾಕುತ್ತಿದ್ದರು. ವಸುಮಿತ್ರನು ಕಾಲವಾದನು. ಮಗುವನ್ನು ಸವತಿಯರಿಬ್ಬರೂ 'ನನ್ನದು, ನನ್ನದು', ಎಂದು ಜಗಳವಾಡತೊಡಗಿದರು. ರಾಜನ ಆಸ್ಥಾನಕ್ಕೆ ನ್ಯಾಯ ತೀರ್ಮಾನಕ್ಕಾಗಿ ಬಂದರು. ಅಭಯಕುಮಾರನು 'ಇಬ್ಬರೂ ಸಮನಾಗಿ ಹಂಚಿಕೊಳ್ಳಿ', ಎಂದು ಕತ್ತಿಯನ್ನು ಮಗುವಿನ ಹೊಟ್ಟೆಯ ಮೇಲೆ ಇಟ್ಟನು. ಹೆತ್ತತಾಯಿಯು ಕಣ್ಣುಮುಚ್ಚಿ 'ಆಕೆಗೇ ಕೊಡಿ' ಎಂದು ಕೈ ಮುಗಿದಳು. ನಿಜವಾದ ತಾಯಿ ಆಕೆಯೇ, ಎಂದು ಕುಮಾರ ತೀರ್ಪಿತ್ತ.

ಭದ್ರನೆಂಬುವನು ಒಬ್ಬ ಒಕ್ಕಲಿಗ. ಆತನ ಹೆಂಡತಿ ಭದ್ರಿ ಒಳ್ಳೆಯ ಚೆಲುವೆ. ಅವಳನ್ನು ಮೋಹಿಸಿದ ರಾಕ್ಷಸನೊಬ್ಬ ಭದ್ರನಂತೆಯೇ ರೂಪಧರಿಸಿ ಮನೆಗೆ ಬಂದ. ಭದ್ರಿಗೆ ಅನುಮಾನವಾಯಿತು. ಅದೇ ಸಮಯಕ್ಕೆ ಆಕೆಯ ಗಂಡನೂ ಬಂದ. ಇಬ್ಬರೂ ಭದ್ರಿಯನ್ನು 'ನನ್ನ ಹೆಂಡತಿ - ನನ್ನ ಹೆಂಡತಿ', ಎಂದು ಕಾದಾಡತೊಡಗಿದರು. ವ್ಯಾಜ್ಯವನ್ನು ನೆರೆ-ಹೊರೆಯವರು ರಾಜಸಭೆಗೆ ತಂದರು. ಅಭಯಕುಮಾರನು ಅವರಿಬ್ಬರನ್ನೂ ಒಂದು ಕೋಣೆಯಲ್ಲಿ ಕೂಡಿಹಾಕಿದ. ಅಲ್ಲಿದ್ದ ಒಂದು ಸಣ್ಣ ಕಿಂಡಿಯಿಂದ ಯಾರು ಹೊರಗೆ ಬರುವರೋ ಅವರೇ ನಿಜವಾದ ಭದ್ರನೆಂದು ಹೇಳಿ ಬಾಗಿಲನ್ನು ಭದ್ರಪಡಿಸಿದ. ವ್ಯಂತರನು ಕಿಂಡಿಯಿಂದ ಹೊರಗೆ ಬಂದು ಬಿಟ್ಟ! ಭದ್ರನಿಗೆ ನ್ಯಾಯ ಸಿಕ್ಕಿತು.

ಹೀಗೆ ಯಾವ ಸಮಸ್ಯೆಯೇ ಇರಲಿ, ಯುದ್ಧ, ಸ್ನೇಹ, ರಾಜಕಾರಣ, ಎಲ್ಲವುದರಲ್ಲಿಯೂ ಅಭಯಕುಮಾರನ ಸಲಹೆ-ಸೂಚನೆಗಳು ಅನಿವಾರ್ಯವಾದುವು. ರಾಜ್ಯದ ಜನತೆಯು ಅವನ ಬುದ್ಧಿಮತ್ತೆಗೆ ಮೆಚ್ಚಿ 'ಪಂಡಿತ' ಎಂದು ಆದರದಿಂದ ಕರೆಯುತ್ತಿದ್ದರು.

ಚೇಟಕ ಮಹಾರಾಜ ಲಿಚ್ಛವಿಯ ಗಣರಾಜ್ಯಗಳಲ್ಲಿ ಒಂದಾದ ವೈಶಾಲಿಯ ದೊರೆ. ವಜ್ಜಿಯ ರಾಜಸಂಘದ ಅಧ್ಯಕ್ಷನೂ ಕೂಡಾ! ಇಕ್ಷ್ವಾಕು ವಂಶದವನು. ಈತನ ಪಟ್ಟದರಾಣಿ ಸುಭದ್ರಾ. ಈತನಿಗೆ ಹತ್ತು ಮಂದಿ ಗಂಡು ಮಕ್ಕಳು. ಏಳು ಜನ ಹೆಣ್ಣು ಮಕ್ಕಳು. ಹಿರಿಯ ಮಗ ಸಿಂಹಭದ್ರನು ವಜ್ಜಿಯ ರಾಜಸಂಘದ ಸೇನಾಧಿಪತಿಯಾಗಿದ್ದನು. ಹಿರಿಯ ಪುತ್ರಿ ತ್ರಿಶಲಾ ದೇವಿ (ಪ್ರಿಯಕಾರಿಣಿ)ಯನ್ನು ಕುಂಡ ಪುರದ ಸಿದ್ಧಾರ್ಥರಾಜನಿಗೆ ಕೊಟ್ಟಿತ್ತು. ಈಕೆಯ ಪುಣ್ಯಗರ್ಭದಲ್ಲಿ ಇಪ್ಪತ್ತನಾಲ್ಕನೆಯ ತೀರ್ಥಂಕರರಾಗುವ ವರ್ಧಮಾನರು ಜನಿಸಿದ್ದರು. ಕಿರಿಯ ಮಗಳು ಚೇಲಿನೀದೇವಿ ಈಕೆಯನ್ನು ಮದುವೆಯಾಗಲು ಬಯಸಿ ಶ್ರೇಣಿಕನು ಹೇಳಿ ಕಳುಹಿಸಿದ.

ಈ ಪರಿವಾರದವರು ಭಗವಾನ್ ಪಾರ್ಶ್ವನಾಥ ತೀರ್ಥಂಕರರ ಪರಂಪರೆಯನ್ನು ಪಾಲಿಸುತ್ತಿದ್ದರು. ಜೈನಧರ್ಮದಲ್ಲಿ ದೃಢವಾದ

ನಂಬುಗೆಯಿಟ್ಟು ತಿಳಿದು ಆಚರಿಸುತ್ತಿದ್ದವರು. ಆ ಧರ್ಮದಲ್ಲಿ ಅನಾಸಕ್ತನಾದ ಶ್ರೇಣಿಕನಿಗೆ ಹೆಣ್ಣುಕೊಡಲು ಚೇಟಕರಾಜನು ಒಪ್ಪಲಿಲ್ಲ. ಶ್ರೇಣಿಕನು ಇದರಿಂದ ಖಿನ್ನನಾದ. ಇದನ್ನು ಅರಿತ ಅಭಯಕುಮಾರ ತನ್ನ ಬುದ್ಧಿ ಚಾತುರ್ಯದಿಂದ ಚೇಳಿನಿಯನ್ನು ತಂದೆಗೆ ವಿವಾಹ ಮಾಡಿಸಿದ. ಶ್ರೇಣಿಕನು ಚೇಳಿನಿಗೆ ಮಹಾದೇವೀ ಪಟ್ಟವನ್ನು ಕಟ್ಟಿದನು.

ಚೇಳಿನಿಯು ಧರ್ಮ ಪರಾಯಣೆ. ಅದು ಶ್ರೇಣಿಕನ ಮೇಲೆ ಯಾವ ಪರಿಣಾಮವನ್ನೂ ಉಂಟು ಮಾಡಲಿಲ್ಲ. ಬದಲು ಆಕೆಯ ದೇವಪೂಜೆ, ಸ್ವಾಧ್ಯಾಯ, ಗುರುಸೇವೆ, ಇವನ್ನೆಲ್ಲ ಅಸಡ್ಡೆಯಿಂದಲೇ ಕಾಣುತ್ತಿದ್ದ. ಚೇಳನಿಯು ಇದರಿಂದ ನೊಂದಳು. ಪತಿಯನ್ನು ಪರಿವರ್ತಿಸಲು ಮೌನವಾಗಿಯೇ ಸಂಕಲ್ಪಿಸಿದಳು. ತನ್ನ ಒಳ್ಳೆಯ ನಡತೆಯಿಂದ ಪರಿವಾರದವರೆಲ್ಲರ ವಿಶ್ವಾಸವನ್ನು ಸಂಪಾದಿಸಿದಳು.

ಶ್ರೇಣಿಕನ ಬದುಕಿನಲ್ಲಿ ಒಂದು ಮಹತ್ತರವಾದ ತಿರುವು ಬಂದಿತು. ಒಮ್ಮೆ ಆತ ಬೇಟೆಯಾಡಲು ಅರಣ್ಯಕ್ಕೆ ಹೋಗಿದ್ದನು. ದಿನವೆಲ್ಲಾ ಅಲೆದರೂ ಬೇಟೆ ಸಿಗಲಿಲ್ಲ. ಆ ಕಾಡಿನಲ್ಲಿಯೇ ಯಮಧರ ಮುನಿಗಳು ಧ್ಯಾನಸ್ಥರಾಗಿದ್ದರು. ಅವರನ್ನು ಕಂಡ ಕೂಡಲೇ ಶ್ರೇಣಿಕನಿಗೆ ಉಗ್ರಕೋಪ ಬಂದಿತು. 'ಇವನನ್ನು ಕಂಡುದೇ ಅಪಶಕುನ. ಬೇಟೆ ಸಿಕ್ಕಲಿಲ್ಲ' ಎಂದು ಕೊಂಡು ಆ ಮುನಿಗಳ ಮೇಲೆ ಬೇಟೆ ನಾಯಿಗಳನ್ನು ಬಿಟ್ಟನು. ಆರ್ಭಟಿಸಿ ಹೋದ ಅವು ಮುನಿಗಳ ಬಳಿ ಶಾಂತವಾಗಿ ಬಿಟ್ಟವು. ಆಗ ರಾಜನ ಕ್ರೋಧ ಇನ್ನೂ ಹೆಚ್ಚಿತು. ಅವರ ಮೇಲೆ ಬಾಣಗಳನ್ನು ಬಿಟ್ಟನು. ಅವು ಹೂವಿನ ಮಾಲೆಯಾಗಿ ಮುನಿಗಳ ಪಾದದಲ್ಲಿ ಬಿದ್ದುವು. ಅದೆಲ್ಲಾ ಅವರ ತಪಸ್ಸಿನ ಪ್ರಭಾವವೆಂದು ಯೋಚಿಸದೆ 'ಈತ ಮಾಯಾವಿ', ಎಂದು ಕೆರಳಿದ. ಅಲ್ಲಿಯೇ ಸತ್ತು ಬಿದ್ದ ಹಾವು ಕಂಡಿತು. ಬಿಲ್ಲಿನ ತುದಿಯಿಂದ ಅದನ್ನು ಎತ್ತಿದವನೇ ಮುನಿಯ ಕೊರಳಿಗೆ ಹಾಕಿ ಬಿಟ್ಟ!

ಆಗ ಶ್ರೇಣಿಕನ ಮನಸ್ಸಿನಲ್ಲಿ ಬಹು ತೀವ್ರವಾದ ಕ್ರೋಧ ಕಷಾಯ ಉಂಟಾಗಿತ್ತು. ಅದು ತತ್‌ಕ್ಷಣ ಅವನನ್ನು ಏಳನೆಯ ನರಕದ ಗತಿಗೆ ಆಯಸ್ಸನ್ನು

ಬಂಧಿಸಿತು. ಅತೀ ಹೆಚ್ಚಿನದಾದ ಮೂವತ್ತಮೂರು ಸಾಗರೋಪದ ಆಯುಸ್ಸಿನ ಅವಧಿಯಾಗಿತ್ತು.

ಚೇಳಿನಿಯನ್ನು ಅಪಹಾಸ್ಯ ಮಾಡಲೆಂದೇ ಶ್ರೇಣಿಕನು ತನ್ನ ಎಸಕವನ್ನು ಹೇಳಿದ. ಕೇಳಿದ ಆಕೆಯ ದುಃಖ ಎಲ್ಲೆ ಮೀರಿತು. ಮುನಿಗಳ ಉಪಸರ್ಗವನ್ನು ನಿವಾರಿಸಲೆಂದು ಹೊರಟಳು. ಅವರು ಸರ್ಪವನ್ನು ತೆಗೆದುಹಾಕಿ ಹೋಗಿಬಿಟ್ಟಿರುವರೆಂದು ಹೇಳಿದ. ಚೇಳಿನಿಯು ಜಿನಮುನಿ ಚರ್ಯೆಯನ್ನು ಹೇಳಿ, 'ಒದಗಿದ ಉಪಸರ್ಗವು ತಾನಾಗಿಯೇ ನಿವಾರಣೆಯಾಗುವ ವರೆವಿಗೂ ಅವರು ಕದಲುವುದಿಲ್ಲ'ವೆಂದು ತಿಳಿಸಿದಳು. ಅವಳೊಡನೆ ಕುತೂಹಲದಿಂದ ತಾನೂ ಹೊರಟ. ಹಿಂದಿನ ದಿನ ಕುಳಿತ ಭಂಗಿಯಲ್ಲಿಯೇ ಮುನಿಗಳು ಇದ್ದರು. ಸರ್ಪದ ದೇಹಕ್ಕೆ ಮುತ್ತಿದ ಇರುವೆ-ಗೊದ್ದಗಳು ಅವರ ಶರೀರವನ್ನೆಲ್ಲಾ ಛಿದ್ರಮಾಡಿಹಾಕಿದ್ದುವು. ಇದನ್ನು ಕಂಡ ಶ್ರೇಣಿಕ ಮುನಿಗಳ ದೃಢತೆಗೆ ಬೆರಗಾದ! ತನ್ನ ಘೋರ ಕೃತ್ಯಕ್ಕೆ ಪಶ್ಚಾತ್ತಾಪ ಪಟ್ಟ. ಚೇಳಿನಿಯ ಪ್ರಯತ್ನದಿಂದ ಯಮಧರರ ಉಪಸರ್ಗಹರಿಯಿತು. 'ಸ್ವಾಮಿ! ತಮ್ಮ ಉಪಸರ್ಗ ದೂರವಾಗಿದೆ. ದಯೆಮಾಡಿ ಕಣ್ತೆರೆಯಿರಿ', ಎಂದು ಕೈ ಮುಗಿದು ಬೇಡಿಕೊಂಡಳು, ಮುನಿಗಳು ಕಣ್ತೆರೆದರು. ಪತ್ನಿಯ ಜೊತೆ ಶ್ರೇಣಿಕನೂ ಮುನಿಗಳನ್ನು ಪ್ರದಕ್ಷಿಣೆ ಮಾಡಿ ನಮಸ್ಕರಿಸಿದ. 'ಧರ್ಮವೃದ್ಧಿಯಾಗಲಿ', ಎಂದು ಇಬ್ಬರನ್ನೂ ಒಟ್ಟಿಗೆ ಹರಸಿದರು. ಉಪಕಾರಿ-ಉಪದ್ರವಿ, ಇಬ್ಬರನ್ನೂ ಒಂದೇ ಸಮನಾಗಿ ಕಂಡ ಯತಿವರರ ಸಮತಾಭಾವಕ್ಕೆ ಶ್ರೇಣಿಕ ಬೆರಗಾದ! ಶಾಂತಭಾವದಿಂದ ಕುಳಿತು ಅವರಿಂದ ಧರ್ಮದ ಉಪದೇಶವನ್ನು ಕೇಳಿದ. ಸರ್ವಜ್ಞನ ವಾಣಿಯನ್ನು ಆಲಿಸಿ ಜೀವಾದಿ ಪದಾರ್ಥಗಳಲ್ಲಿ ಶ್ರದ್ಧೆಯುಂಟಾಗುವ 'ಆಜ್ಞಾಸಮ್ಯಕ್ತ್ವ'ವು ಅವನಿಗೆ ಪ್ರಾಪ್ತವಾಯಿತು.

ಅಂದಿನಿಂದ ಚೇಳಿನಿ-ಶ್ರೇಣಿಕರು ಧರ್ಮಕಾರ್ಯಗಳಲ್ಲಿ ಜೊತೆಯಾದರು. ಧರ್ಮಚರ್ಚೆಯಲ್ಲಿ ಉಲ್ಲಾಸ ಪಡೆಯುತ್ತಿದ್ದರು.

ಒಮ್ಮೆ, ಮೂವರು ಯತಿವರರು ಆಹಾರಕ್ಕಾಗಿ ರಾಜಬೀದಿಯಲ್ಲಿ ಬರುತ್ತಿದ್ದರು. ಅದನ್ನು ಕಂಡ ಶ್ರೇಣಿಕನು ಚೇಳಿನಿಯೊಡನೆ ಅವರನ್ನು

ಎದಿರುಗೊಂಡು ನಿಲ್ಲಿಸಿದನು. ಕಾಲು ತೊಳೆದು ನಮಸ್ಕರಿಸುವಾಗ, 'ಮನಸ್ಸು, ಮಾತು, ಕಾಯಕಗಳ ನಿಗ್ರಹವನ್ನು ಸಾಧಿಸಿದ ಮುನಿಗಳಿಗೆ ನಮಸ್ಕಾರ' ಎಂದರು. ಮುನಿಗಳು ಆಹಾರವನ್ನು ಸ್ವೀಕರಿಸದೆ ಹಿಂತಿರುಗಿಬಿಟ್ಟರು!

ಇದಕ್ಕಾಗಿ ಪರಿವಾರದವರೆಲ್ಲ ದುಃಖಿಸಿದರು. ಮುನಿಗಳು ತಂಗಿದ್ದ ಸ್ಥಳಕ್ಕೆ ಹೋಗಿ ಆಹಾರವನ್ನು ಸ್ವೀಕರಿಸದೆ ಬಂದುದಕ್ಕೆ ಕಾರಣವನ್ನು ಕೇಳಿದರು. ಮುನಿಗಳು ಒಬ್ಬರೊಬ್ಬರೂ ತಮ್ಮ ಯತಿಚರ್ಯೆಗೆ ಕುಂದು ಉಂಟಾದಂತಹ ಒಂದೊಂದು ಕಾರಣವನ್ನು ಹೇಳಿದರು. "ನೀವು ಗುಪ್ತಿಧರರೆಂದಿರಿ. ನಮ್ಮ ಸಾಧನೆಯಲ್ಲಿ ದೋಷ ಉಂಟಾಯಿತು. ಮತ್ತೆ ಅದನ್ನು ಸಾಧಿಸುವ ವರೆವಿಗೆ 'ಗುಪ್ತಿಧರ'ರೆಂಬ ಮಾತನ್ನು ಒಪ್ಪಿಕೊಂಡೆವಾದರೆ ಸಂಯಮವಿಲ್ಲ!" ಎಂದರು.

ಧರ್ಮಸೂಕ್ಷ್ಮರು ಎಳೆಗಳನ್ನು ಬಿಡಿಸಿಟ್ಟು ತಮ್ಮ ನಿಯಮದಲ್ಲಿ ಉಂಟಾದ ಲೋಪವನ್ನು ಮುಚ್ಚುಮರೆಯಿಲ್ಲದೇ ಒಪ್ಪಿಕೊಂಡ ಮುನಿಗಳ ನಿರ್ಮಲ ಮನಸ್ಸಿಗೆ ಶ್ರೇಣಿಕನು ಮಾರುಹೋದ. ಅವನ ಶ್ರದ್ಧೆ ಮತ್ತೂ ದೃಢವಾಯಿತು.

ಚೇಳಿನೀದೇವಿಗೆ ಎಂಟು ಮಂದಿ ಗಂಡು ಮಕ್ಕಳಾದರು. ಎಲ್ಲರೂ ಶೂರರು. ವಿದ್ಯಾವಿನಯ ಸಂಪನ್ನರು.

ಭಗವಾನ್ ಮಹಾವೀರರ ಪ್ರಥಮ ಉಪದೇಶವು ಶ್ರೇಣಿಕನ ರಾಜಧಾನಿಯಾದ ರಾಜಗೃಹದ ವಿಪುಲಾಚಲದ ಮೇಲೆ ಆಯಿತು. ಅಲ್ಲಿಗೆ ಸಾಮ್ರಾಟ್ ಶ್ರೇಣಿಕನು ಭಕ್ತಿಭರನಾಗಿ ಪರಿವಾರದೊಡನೆ ಭಗವಂತರ ದರ್ಶನಕ್ಕೆ ಹೋದನು. ವಂದಿಸಿ ಸ್ತುತಿಸಿದನು. "ಭಗವಾನ್, ಸುಖ ಎಂದರೇನು?" ಎಂದು ಕೈ ಮುಗಿದು ಕೇಳಿದನು. ಭಗವಂತರ ದಿವ್ಯವಾಣಿಯು ಮೊಳಗಿತು. "ನಿಜದ ಅರಿವೇ ಸುಖ. ಅದಕ್ಕೆ ಸಮೀಚೀನವಾದ ಶ್ರದ್ಧೆ, ದೋಷವಿಲ್ಲದ ತಿಳುವಳಿಕೆ, ತಿಳಿದುದನ್ನು ಆಚರಿಸುವ ನಡೆವಳಿಕೆ ಇವುಗಳಿಂದಲೇ ಗುರಿಮುಟ್ಟಲು ಸಾಧ್ಯ!"

"ಭಗವಾನ್, ಆ ಗುರಿ ಯಾವುದು?"

'ತನ್ನ ನಿಜಸ್ವರೂಪವನ್ನು ಅರಿಯದ ಆತ್ಮ ಅನಾದಿಕಾಲದಿಂದ ದೇಹಪಂಜರದ ಬಂದಿಯಾಗಿದ್ದಾನೆ. ಇದರಿಂದ ಬಿಡುಗಡೆ ಪಡೆಯುವುದೇ ಗುರಿ! ಯಾವಾಗ ದೇಹ ಮೊದಲುಗೊಂಡು ಉಳಿದ ವಸ್ತುಗಳೆಲ್ಲಾ ಬೇರೆ. ಕೇವಲ, ಜ್ಞಾನ-ಚೈತನ್ಯಗಳು ಮಾತ್ರ ನನ್ನದು!' ಎನ್ನುವ ಆತ್ಮ ಸ್ವರೂಪ ಜ್ಞಾನ ಉಂಟಾಗುವುದೋ ಆಗ ಮುಕ್ತಿಯ ದಾರಿ ಸುಗಮ.

"ಅದಕ್ಕೆ ಸಾಧನ ಯಾವುದು ಪ್ರಭೂ?"

"ಧರ್ಮವೇ ಬಿಡುಗಡೆಗೆ ಸಾಧನ. ಪುರುಷಾರ್ಥಗಳು ನಾಲ್ಕು. ಧರ್ಮ ಅರ್ಥ-ಕಾಮ-ಮೋಕ್ಷ. ಅರ್ಥ ಮತ್ತು ಕಾಮದ ಪರಿಚಯವಾಗುತ್ತಿರುತ್ತದೆ. ಧರ್ಮ ಮತ್ತು ಮೋಕ್ಷಗಳಿಗೆ ಕಾರ್ಯ-ಕಾರಣ ಸಂಬಂಧವಿದೆ. ಧರ್ಮದಿಂದಲೇ ಮೋಕ್ಷಸಾಧನ!"

ಭಗವಂತನ ದಿವ್ಯವಾಣಿಯಿಂದ ಶ್ರೇಣಿಕನ ಸಂದೇಹವೆಲ್ಲ ನಿವಾರಣೆಯಾಯಿತು. 'ಮೋಕ್ಷ ಮಾರ್ಗಕ್ಕೆ ಅನುಕೂಲವಾದ-ಮನೋಧರ್ಮವೇ ಸಮ್ಯಕ್ತ್ವ' ಎಂಬುದಾಗಿ ತಿಳಿಸಿದ ಮಹಾವೀರ ಸ್ವಾಮಿ ಅದನ್ನು ವಿವರಿಸಿದರು. ಶ್ರೇಣಿಕ ತನ್ನ ಹಿಂದಿನ ಭವಗಳನ್ನೂ ಕೇಳಿ ತಿಳಿದ.

ಭಗವಂತನ ಸಮವಸರಣಕ್ಕೆ ಶ್ರೇಣಿಕನು ಪದೇ-ಪದೇ ಹೋಗುತ್ತಿದ್ದ. ಧರ್ಮಸಭೆಯಲ್ಲಿ ಆತನೇ ಪ್ರಧಾನ ಶ್ರೋತೃ! ಪ್ರಭು ವಾಕ್ಯವನ್ನು ಅರ್ಥಮಾಡಿ ವಿವರಿಸಬಲ್ಲ ಪ್ರಧಾನ ಗಣಧರರು ಇಂದ್ರ ಭೂತಿ ಗೌತಮರು. ಶ್ರೇಣಿಕನು ಅವರ ಬಳಿ ಅರುವತ್ತು ಸಾವಿರ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದಿದ್ದನು. ಅವನ ಜಿಜ್ಞಾಸೆಗೆ ಕಥೆಗಳ ಮೂಲಕ ಉದಾಹರಣೆಗಳ ಮೂಲಕ ತತ್ವಗಳನ್ನು ಬಿಡಿಸಿ ಹೇಳಿ ಸಮಾಧಾನಕರವಾದ ಉತ್ತರಗಳನ್ನು ಅವರು ಕೊಡುತ್ತಿದ್ದರು. ಶ್ರೇಣಿಕನ ರಾಣಿಯರು, ಮಕ್ಕಳು ಉತ್ತಮ ಶ್ರಾವಕವ್ರತಗಳನ್ನು ಧಾರಣೆ ಮಾಡಿದರು.

ಶ್ರೇಣಿಕನಿಗೆ ಗಾಢವಾದ, ನಿರ್ದೋಷವಾದ 'ಕ್ಷಾಯಿಕ ಸಮ್ಯಕ್ತ್ವ'ವು ಉಂಟಾಯಿತು. ಇದು ಪ್ರಾಪ್ತವಾದುದರಿಂದ ಆವನಿಗೆ ಏಳನೆಯ ನರಕ ಗತಿಯ ಬಂಧವು ಒಂದನೆಯ ನರಕಕ್ಕೆ ಆಯಿತು. ಮೂವತ್ತಮೂರು ಸಾಗರೋಪಮದವರೆಗೂ ಇದ್ದ ಆಯುಸ್ಸು ಎಂಭತ್ತನಾಲ್ಕು ಸಾವಿರ ವರ್ಷವಾಯಿತು. ಮುಂದೆ ಭವಿಷ್ಯತ್ಕಾಲದ ಇಪ್ಪತ್ತನಾಲ್ಕು ತೀರ್ಥಂಕರರಲ್ಲಿ ಮೊದಲನೆಯ ತೀರ್ಥಂಕರ, 'ಮಹಾಪದ್ಮ', ನಾಗುವ ಪುಣ್ಯವು ಬಂಧವಾಯಿತು. ಈ ಪುಣ್ಯವು ಬಹುಮಟ್ಟಿಗೆ ಮಹಾಮುನಿಗಳಿಗೆ ಆಗುವುದು. ಆದರೆ, ಶ್ರಾವಕರೂ ಅಹಿಂಸೆಯನ್ನು ಲೋಪವಿಲ್ಲದೆ ಪಾಲಿಸಿದರೆ, ಹದಿನಾರು ಭಾವನೆಗಳನ್ನು ಭಾವಿಸುತ್ತಾ ಅದರಂತೆ ನಡೆಯುತ್ತಿದ್ದರೆ ಅಂತಹ ಪುಣ್ಯಬಂಧ ಮಾಡಿಕೊಳ್ಳಬಹುದೆಂದು ನಾವು ಶ್ರೇಣಿಕ ರಾಜನ ಚರಿತ್ರೆಯಿಂದ ತಿಳಿಯಬಹುದು.

ಶ್ರೇಣಿಕನು ಗೃಧ್ರಕೂಟ ಪರ್ವತದಲ್ಲಿದ್ದ ಗೌತಮ ಬುದ್ಧರ ಬಳಿಯೂ ಕೆಲವು ಬಾರಿ ಹೋಗಿದ್ದನೆಂದು ಬೌದ್ಧ ಗ್ರಂಥಗಳಿಂದ ತಿಳಿದು ಬರುತ್ತದೆ. ಆತ ಮಹಾರಾಜ, ಎಲ್ಲಾ ಧರ್ಮದವರನ್ನೂ ಒಂದೇ ರೀತಿಯಾಗಿ ಕಾಣಬೇಕಾದುದು ಆತನ ಕರ್ತವ್ಯ. ಹೀಗಾಗಿ ಹೋಗಿರಬಹುದು. ಆದರೂ ಅವನ ಅನನ್ಯ ಭಕ್ತಿ ಶ್ರದ್ಧೆಗಳು, ಭಗವಾನ್ ಮಹಾವೀರರಲ್ಲಿಯೇ ಇದ್ದುವೆಂಬುದು ನಿಸ್ಸಂದೇಹ.

ತಂದೆಯೊಂದಿಗೆ ಭಗವಾನರ ಬಳಿ ಹೋಗಿ ಬರುತ್ತಾ ತನ್ನ ಭವಾವಳಿಯನ್ನೂ ಕೇಳಿದ ಅಭಯ ಕುಮಾರನಿಗೆ ವೈರಾಗ್ಯ ಹುಟ್ಟಿತು. ದೀಕ್ಷೆಯನ್ನು ಪಡೆದ. ಮಹಾವೀರರ ಸಂದೇಶವನ್ನು ಸಾರುತ್ತಾ ಪಾರಸ (ಇರಾಣ) ದೇಶಕ್ಕೂ ಹೋದ. ಅಭಯಕುಮಾರ ಮುನಿಯ ಪ್ರಭಾವವು ಅಲ್ಲಿ ವಿಶೇಷವಾಗಿ ಆಯಿತು. ಅವನ ಉಪದೇಶದಿಂದ ಪ್ರಭಾವಿತನಾದ ರಾಜಕುಮಾರ ಆರ್ದ್ರಕನು ನಿರ್ಗ್ರಂಥ ದೀಕ್ಷೆಯನ್ನು ತೆಗೆದುಕೊಂಡ. ಅವರಿಬ್ಬರೂ ದೇಶ-ದೇಶ ತಿರುಗಿ ಅಹಿಂಸಾ ಧರ್ಮವನ್ನು ಪ್ರಚಾರ ಮಾಡಿದರು.

ಚೇಳಿನಿಯ ಪುತ್ರ ವಾರಿಷೇಣನು ಶ್ರಾವಕ ವ್ರತವನ್ನು ನಿಷ್ಠೆಯಿಂದ ಪಾಲಿಸುತ್ತಿದ್ದನು. ಪ್ರತಿ ಚತುರ್ದಶಿಯಂದು ಉಪವಾಸ. ರಾತ್ರಿ ಮಸಣ ಭೂಮಿಯಲ್ಲಿ ನಿಂತು ಧ್ಯಾನ ಮಾಡುತ್ತಿದ್ದನು. ಒಂದು ಸಲ ಅರಮನೆಯಲ್ಲಿ ಕಳ್ಳತನ ಮಾಡಿ ಬರುತ್ತಿದ್ದ ಕಳ್ಳರು ತಳವಾರರ ಕಣ್ಣಿಗೆ ಬಿದ್ದರು. ತಪ್ಪಿಸಿಕೊಂಡು ಓಡುವಾಗ ಧ್ಯಾನಮಾಡುತ್ತಿದ್ದ ವಾರಿಷೇಣನ ಬಳಿ ಒಡವೆಗಳನ್ನು ಹಾಕಿ ಓಡಿ ಬಿಟ್ಟರು ! ಭಟ್ಟರು ವಾರಿಷೇಣನೇ ಕಳ್ಳನೆಂದು ಬಗೆದರು. ಕಟ್ಟಿ ಎಳೆತಂದು ಶ್ರೇಣಿಕ ಮಹಾರಾಜರಿಗೆ ವಿಷಯ ತಿಳಿಸಿದರು. ಆತ, "ಅರಮನೆಯ ಕಳ್ಳನಿಗೆ ಮರಣದಂಡನೆಯೇ ಶಿಕ್ಷೆ!" ಎಂದು ಅಪ್ಪಣೆ ಮಾಡಿದ. ತಲೆಗಡುಕರ ಕತ್ತಿಯು ಕುಮಾರನಿಗೆ ಹೂವಿನಹಾರವಾಗಿ ಪರಿಣಮಿಸಿತು. ಇದನ್ನು ಕೇಳಿದ ಶ್ರೇಣಿಕ ವಿಸ್ಮಯಪಟ್ಟು ನೋಡಲು ಬಂದ. ತನ್ನ ಮಗನನ್ನು ಕಂಡು ತುಂಬಾ ವ್ಯಥೆಯಾಯಿತು. ತಂದೆಯ ಯಾವ ಅನುನಯಕ್ಕೂ ವಾರಿಷೇಣ ಕಿವಿಗೊಡಲಿಲ್ಲ. ಅವನಲ್ಲಿ ವೈರಾಗ್ಯ ದೃಢವಾಗಿತ್ತು. ಪುಷ್ಪಗಿರಿಗೆ ತೆರಳಿದ. ಅಲ್ಲಿ ಸುರಧೇನು ಎಂಬ ಆಚಾರ್ಯರ ಬಳಿ ದೀಕ್ಷೆ ಪಡೆದು ಕಠಿಣ ತಪದಲ್ಲಿ ನಿರತನಾದ.

ಸಮವಸರಣಕ್ಕೆ ಹೋಗುವ ಶ್ರೇಣಿಕನು ತನ್ನ ರಾಜವೈಭವವನ್ನು ತೊರೆದು ಸಾಮಾನ್ಯ ಶ್ರಾವಕನಂತೆ ಹೋಗುತ್ತಿದ್ದ. ಅಲ್ಲಿ ಅವನ ಸಂದೇಹಗಳಿಗೆ ಸಮಾಧಾನ ಸಿಕ್ಕುತ್ತಿತ್ತು. ಒಮ್ಮೆ, "ಭಗವನ್ ! ಸಂಸಾರದ ಜಂಜಡದಲ್ಲಿ ಸಾಮಾನ್ಯರು ತಮ್ಮ ಆತ್ಮ ಕಲ್ಯಾಣವನ್ನು ಹೇಗೆ ಮಾಡಿಕೊಳ್ಳಬೇಕು ?" ಎಂದು ಕೇಳಿದ. ಇದು ಶ್ರೇಣಿಕನೊಬ್ಬನ ಪ್ರಶ್ನೆಯಾಗಿರಲಿಲ್ಲ, ಇಡೀ ಸಮುದಾಯದ ಪ್ರಶ್ನೆಯಾಗಿತ್ತು.

"ಆತ್ಮ ಕಲ್ಯಾಣಕ್ಕೆ ತಪಸ್ಸು ಶ್ರೇಷ್ಠ ಮಾರ್ಗ. ಸಾಮಾನ್ಯರೂ ಕೂಡ ದಿನದ ಸ್ವಲ್ಪ ಭಾಗವನ್ನು ಧ್ಯಾನಕ್ಕಾಗಿ ಮೀಸಲಿಡಬೇಕು. ಎಲ್ಲಿಯುವರೆಗೆ ಮನಸ್ಸು ಇಂದ್ರಿಯ ಸುಖವನ್ನೇ ಚಿಂತಿಸುವುದೋ ಅಲ್ಲಿಯವರೆಗೆ ಮನೋ ಬಲವು ಹುಟ್ಟಲಾರದು. ಮನಸ್ಸಿನ ಶಕ್ತಿ ಎಚ್ಚಿದೆಯೆಂದರೆ, ಕ್ಷಣ ಮಾತ್ರದಲ್ಲಿ

ಸಂಸಾರವನ್ನು ನಷ್ಟ ಮಾಡುವಂತಹುದು! ಆತ್ಮನ ಗುಣಗಳಿಗೆ ಮಾರಕವಾಗಿರುವಂತಹ ಇಂದ್ರಿಯ ಸುಖದ ಅಪೇಕ್ಷೆಯನ್ನು ಸಂಯಮದ ಮುಖಾಂತರ ವಶಮಾಡಿಕೊಳ್ಳಬೇಕು. ಇದಕ್ಕಾಗಿ ಸದಾ ಪ್ರಯತ್ನ ಶೀಲನಾಗಿರಬೇಕು."

"ಧನ್ಯನಾದೆ ಪ್ರಭೂ! ಚೆನ್ನಾಗಿ ಅರ್ಥವಾಯಿತು" ಶ್ರೇಣಿಕ ಭಾವುಕನಾಗಿ ನುಡಿದ.

"ಹೇ! ಶ್ರೇಣಿಕ! ಸಂಸಾರದಲ್ಲಿ ಸುಖಸಿಗುವುದೆಂದು ಭಾವಿಸುವುದು ಮರುಳು ! ಆತ್ಮನ ಸ್ವಭಾವವೇ ಸ್ವತಂತ್ರತೆ, ಅದನ್ನು ಇಂದ್ರಿಯ ವಾಸನೆಗಳ ದಾಸನನ್ನಾಗಿ ಮಾಡುವುದು ಸರಿಯಲ್ಲ. ಕೇವಲ ಇಂದ್ರಿಯ ಸುಖದ ಕಡೆಯೇ ಯೋಚಿಸುವುದನ್ನು ಬಿಟ್ಟಾಗ ಆತ್ಮ ತನ್ನ ಸ್ವಭಾವವಾದ ಸ್ವಾತಂತ್ರ್ಯವನ್ನು ಪಡೆಯುತ್ತದೆ. ಆ ಸ್ವಾತಂತ್ರ್ಯವೇ ಸುಖದ ಮೂಲ!"

ಶ್ರೇಣಿಕ-ಭಗವಂತ-ಗಣಧರರ ಪ್ರಶ್ನೆ-ಉತ್ತರಗಳು ಶ್ರೋತೃಗಳ ಮೂಲಕ ಪ್ರಪಂಚದಲ್ಲೆಲ್ಲ ಪಸರಿಸುತ್ತಿತ್ತು. ಸಮಾಜದಲ್ಲಿ ಹಬ್ಬಿದ ಮೂಢನಂಬಿಕೆಯು ಅಶುದ್ಧ ಆಚರಣೆಯು ಇದರ ಮೂಲಕ ನಿವಾರಣೆಯಾಯಿತು. ಸಮಾಜ, ತನ್ನನ್ನು ತಾನು ತಿದ್ದಿಕೊಂಡಿತು.

ರಾಜಪುತ್ರ ಮೇಘಕುಮಾರ ಭಗವಾನರ ಉಪದೇಶದಿಂದ ವಿರಕ್ತನಾದ. ಮಗನ ಮನಸ್ಸನ್ನು ಬದಲಿಸಲು ಶ್ರೇಣಿಕ ತಪಸ್ಸಿನ ಕಷ್ಟವನ್ನು ವಿವರಿಸಿದ. ಆದರೂ ಕುಮಾರನ ದೃಢತೆ ಬಲವಾಗಿತ್ತು. ಇದನ್ನು ಕಂಡ ಶ್ರೇಣಿಕ ದೀಕ್ಷೆಗೆ ಅನುಮತಿಸಿದ. ಅಷ್ಟೇ ಅಲ್ಲ, ವೈಭವದಿಂದ ದೀಕ್ಷೋತ್ಸವವನ್ನೂ ಮಾಡಿದ.

ಪೋತನಪುರದ ರಾಜ ಪ್ರಸನ್ನಚಂದ್ರ. ಭಗವಾನರ ಉಪದೇಶವನ್ನು ಕೇಳಿ ಅವನಲ್ಲಿ ವಿರಕ್ತಿ ಹುಟ್ಟಿತು. ಚಿಕ್ಕ ವಯಸ್ಸಿನ ಮಗನಿಗೆ ಪಟ್ಟಕಟ್ಟಿ ಅವನು ಮುನಿಯಾದನು. ಆದರೆ, ಮಂತ್ರಿಗಳು ಈ ಸಂದರ್ಭವನ್ನು ತಮ್ಮ ಸ್ವಾರ್ಥಕ್ಕಾಗಿ

ಬಳಸಿಕೊಂಡರು. ಅವರು ಚಂಪಾಪುರದ ಅರಸ ದಧಿವಾಹನನೊಂದಿಗೆ ಸಂಚು ಮಾಡಿ ರಾಜ್ಯವನ್ನು ವಶಪಡಿಸಿಕೊಂಡರು. ರಾಜಕುಮಾರನಿಗೆ ನಿಲ್ಲಲು ನೆಲೆಯಿಲ್ಲವಾಯಿತು. ಇದನ್ನು ಕೇಳಿದ ಶ್ರೇಣಿಕ ಪೋತನಪುರಕ್ಕೆ ಹೋಗಿ ರಾಜ್ಯವನ್ನು ವಶಪಡಿಸಿಕೊಂಡವರೊಡನೆ ಮಾತನಾಡಿದ. ದಧಿವಾಹನನಿಗೂ ತನ್ನ ತಪ್ಪಿನ ಅರಿವಾಯಿತು. ನೆಲೆಯಿಲ್ಲದೆ ತಿರುಗುತ್ತಿದ್ದ ರಾಜಕುಮಾರನನ್ನು ಕರೆಸಿ ಪುನಃ ರಾಜ್ಯದಲ್ಲಿ ಪ್ರತಿಷ್ಠಾಪಿಸಿದ. ಮುಂದೆಯೂ ರಾಜ್ಯದಲ್ಲಿ ಸುವ್ಯವಸ್ಥೆ ನೆಲೆಸುವಂತೆ ಮಾರ್ಗದರ್ಶನ ಮಾಡಿದ.

ಚೇಳಿನಿಯು ಶ್ರೇಣಿಕನ ಸಹವರ್ತಿ, ಸಹಚಿಂತಕಿ, ಕೆಲವು ಸಮಯ ಮಾರ್ಗದರ್ಶಿಯೂ ಆಗಿರುತ್ತಿದ್ದಳು. ಸಮವಸರಣಕ್ಕೆ ಪರಿವಾರಸಹಿತ ಈ ದಂಪತಿಗಳು ಹೋಗುತ್ತಿದ್ದರು. ಶ್ರೇಣಿಕನ ಹನ್ನೆರಡು ರಾಣಿಯರು ಆಚರಿಸಿದ ನೋಂಪಿಗಳು 'ವಿನಯಸಂಪತ್ತಿ' ನೋಂಪಿಯ ಕಥೆಯಲ್ಲಿ ಬರುತ್ತದೆ. ಜೈನರ ನೂರಾರು ನೋಂಪಿಯ ಕಥೆಗಳಲ್ಲಿ ಶ್ರೇಣಿಕ-ಚೇಳಿನಿಯರಿಂದಲೇ ಆರಂಭವಾಗುತ್ತವೆ. ಶ್ರೇಣಿಕನು ಮಹಾವೀರ ಭಗವಂತರನ್ನು ಕಾಣಲು ಹೊರಡುವಾಗ ಹೊಯ್ಸಿದ 'ಆನಂದಭೇರಿ', ಊದಿದ ಶಂಖ-ಕಹಳೆಗಳು, ರಾಜವೈಭವದ ವರ್ಣನೆ, ಸಮವಸರಣದ ವರ್ಣನೆ, ಶ್ರೇಣಿಕನ ಭಕ್ತಿ, ಇವುಗಳೆಲ್ಲಾ ಈ ಕಥೆಗಳಲ್ಲಿ ಹಾಸುಹೊಕ್ಕಾಗಿವೆ.

ಧಾರ್ಮಿಕ ಆಚರಣೆಯಲ್ಲಿ ಸದಾನಿರತನಾಗಿದ್ದ ಶ್ರೇಣಿಕನ ಪರಿವಾರ ಸಹಜವಾಗಿ ವೈರಾಗ್ಯದತ್ತ ವಾಲಿತು, "ಭೌತಿಕ ಸುಖದಿಂದ ಆತ್ಮನನ್ನು ತೃಪ್ತಿಪಡಿಸಲು ಎಂದೂ ಸಾಧ್ಯವಿಲ್ಲ. ಇದನ್ನು ಅರಿತು ಆತ್ಮನಿಗೆ ಬೇಕಾದ ಸ್ವಾತಂತ್ರ್ಯ ಸುಖವನ್ನು ಗಳಿಸುವ ಉಪಾಯವನ್ನು ಮಾಡಬೇಕು. ಆತ್ಮ ಶರೀರದಲ್ಲಿ ಇದ್ದಾನೆಯೇ ? ಇಲ್ಲ, ಶರೀರದ ಜೊತೆಗಿದ್ದಾನೆ. ನೀರು-ಹಾಲು ಸೇರಿದಂತೆ ಕಂಡರೂ, ಎರಡರ ಸ್ವಭಾವ ಬೇರೆ ಬೇರೆಯೇ! ಬೆಂಕಿಯ ಸಂಪರ್ಕ ಬಂದಾಗ ನೀರು ಆವಿಯಾಗಿ ಹೋಗುತ್ತದೆ, ಹಾಲು ಕಾದುಗಟ್ಟಿಯಾಗುತ್ತದೆ. ಹಾಗೆಯೇ, ಕರ್ಮಮಲ ಸಂಪರ್ಕದಿಂದ ಆತ್ಮನು

ಈ ಶರೀರದಲ್ಲಿ ಸೇರಿದ್ದಾನೆ. ಜ್ಞಾನರೂಪದ ದಿವ್ಯ ಚಕ್ಷುವಿನಿಂದ ನೋಡಿದಾಗ ಆತ್ಮನ ಇರವು ಗೋಚರವಾಗುವುದು. ಆ ಜ್ಞಾನವು 'ಕೇವಲಜ್ಞಾನ' ಎನ್ನಿಸಿಕೊಳ್ಳುವುದು. ತಪದಿಂದ ಮಾತ್ರ ಇಂತಹ ಜ್ಞಾನವನ್ನು ಪಡೆಯಲು ಸಾಧ್ಯ!"

ಈ ತಪದ ಮಹತ್ವವನ್ನು ಸ್ವಾಮಿಯಿಂದ ಕೇಳಿದ ಶ್ರೇಣಿಕನ ಪರಿವಾರದವರ ಮೇಲೆ ಅಗಾಧ ಪರಿಣಾಮ ಉಂಟಾಯಿತು. ದರ್ಶನಕ್ಕಾಗಿ ಹೋದ ರಾಣಿಯರಿಗೆ (ಚೇಲಿನಿಯೊಬ್ಬಳ ಹೊರತು) ವೈರಾಗ್ಯವು ಉತ್ಪತ್ತಿಯಾಯಿತು. ಸಂಸಾರ ಶೂಲದಂತೆ ಭಾಸವಾಯಿತು. ಸ್ವಾಮಿಯ ಬಳಿ ದೀಕ್ಷೆ ಬೇಡಿದರು. ಅವರ ವೈರಾಗ್ಯದ ದೃಢತೆಯನ್ನು ಅರಿತ ಮಹಾವೀರರು ದೀಕ್ಷೆಯನ್ನು ಅನುಗ್ರಹಿಸಿದರು. ಅವರೆಲ್ಲ ಆರ್ಯಿಕಾ ಚಂದನಾದೇವಿಯ ನೇತೃತ್ವದಲ್ಲಿ ತಪೋನಿರತರಾದರು.

ಒಂದು ದಿನ ಶ್ರೇಣಿಕನು ವರ್ಧಮಾನ ತೀರ್ಥಂಕರರ ಬಳಿ ಬಂದು ವಂದಿಸಿ, ಧರ್ಮೋಪದೇಶವನ್ನು ಕೇಳಿದ ನಂತರ ಜಂಬೂ ದ್ವೀಪದ ಭರತದ ಅವಸರ್ಪಿಣಿಯ ವ್ಯವಹಾರವನ್ನೂ ಕುಲಧರಾದಿ ಪುರಾಣವನ್ನೂ ಉತ್ಸರ್ಪಿಣಿಯ ವ್ಯವಹಾರವನ್ನೂ, ಆಗಿನ ಪುರಾಣವನ್ನೂ ವಿವರಿಸಬೇಕೆಂದು ಪ್ರಾರ್ಥಿಸಿದನು. ಗೌತಮ ಗಣಧರರು ಅವೆಲ್ಲವನ್ನೂ ವಿಸ್ತಾರವಾಗಿ ಮನಮುಟ್ಟುವಂತೆ ಹೇಳಿದರು. ಕೇಳಿದವರೆಲ್ಲ ಗತಿಯ ಕುರಿತು ಚಿಂತಿಸುತ್ತ ಶ್ರೇಷ್ಠಗತಿಗೆ ಹೋಗುವ ಮಾರ್ಗವನ್ನೇ ಕುರಿತು ಮಾತನಾಡುತ್ತ ತಮ್ಮ-ತಮ್ಮ ನಿವಾಸಿಗಳಿಗೆ ತೆರಳಿದರು.

ಹೀಗೆ ಶ್ರೇಣಿಕನು ಸಭಿಕರ ಮನಸ್ಸನ್ನು ಅರಿತವನಂತೆ ಪ್ರಶ್ನೆ ಮಾಡುತ್ತ, ತತ್ವಸಾರದ ತಿರುಳನ್ನು ಎಲ್ಲರೂ ಸವಿಯುವಂತೆ ಮಾಡುತ್ತಿದ್ದನು.

ಮತ್ತೊಂದು ದಿನ ಶ್ರೇಣಿಕನು. ಅಶೋಕವನದಲ್ಲಿ ಅಶೋಕವೃಕ್ಷದ-ಕೆಳಗೆ ಕುಳಿತಿದ್ದ ಜೀವಂಧರ ಮುನಿಗಳನ್ನು ಕಂಡು ಅವರ ರೂಪ-ಯೌವನ, ಸೌಂದರ್ಯಗಳಿಗೆ ಬೆರಗಾಗಿ 'ಇವರು ಯಾರು?' ಎಂದು ಸುಧರ್ಮ ಗಣಧರರ ಬಳಿ ಕೇಳಿದನು. ಗಣಧರರು ಜೀವಂಧರನ ಚರಿತೆಯನ್ನೆಲ್ಲಾ ಹೇಳಿದರು.

ಭಗವಾನ್ ಮಹಾವೀರರು ಮತ್ತೊಮ್ಮೆ ವಿಪುಲಾಚಲಕ್ಕೆ ಆಗಮಿಸಿದರು. ಶ್ರೇಣಿಕನು ವಂದಿಸಲು ಹೋಗುತ್ತಾ ದಾರಿಯಲ್ಲಿ ಧರ್ಮರುಚಿ ಮುನಿಗಳು ಧ್ಯಾನ ತನ್ಮಯರಾಗಿದ್ದುದನ್ನು ನೋಡಿದನು. ಅವರಿಗೆ ಭಕ್ತಿಯಿಂದ ಎರಗಿ, ಮಹಾವೀರರ ಬಳಿ ಬಂದು ಧರ್ಮರುಚಿಗಳ ಬಗ್ಗೆ ಕೇಳಿದನು. ಅವರು ಮುನಿಗಳ ಚರಿತೆಯನ್ನು ನಿರೂಪಿಸಿದರು. ಚಂಪಾಪುರದ ರಾಜ ಶ್ವೇತವಾಹನ, ಸಂಸಾರದಲ್ಲಿ ವಿರಕ್ತಿಹೊಂದಿ ತನ್ನ ಮಗ ವಿಮಲವಾಹನನಿಗೆ ರಾಜ್ಯವನ್ನು ಒಪ್ಪಿಸಿ ತಾನು ಮಹಾವೀರರ ಬಳಿ ದೀಕ್ಷೆಪಡೆದನು. ಮಾಸೋಪವಾಸ ಮಾಡಿ ಪಾರಣೆಗಾಗಿ ನಗರದಲ್ಲಿ ಹೊರಟನು. ಅಲ್ಲಿ ಕೆಲವರು ಮಾತನಾಡಿ ಕೊಳ್ಳುತ್ತಿದ್ದುದು ಇವರ ಕಿವಿಗೆ ಬಿತ್ತು. ಅದು ಏನೆಂದರೆ, "ವಿಮಲವಾಹನನ್ನು ದ್ರೋಹಿಗಳು ಸೆರೆಗೆ ತಳ್ಳಿ ರಾಜ್ಯವನ್ನು ಅಪಹರಿಸಿದ್ದರು! ಮುನಿಗಳ ಮನಸ್ಸಿನಲ್ಲಿ ಕ್ಷೋಭೆಯುಂಟಾಯಿತು. ಹಿಂತಿರುಗಿಬಿಟ್ಟರು ! ಅವರ ಮನಸ್ಸು ಈಗ ಧ್ಯಾನದಲ್ಲಿಲ್ಲ. ಶತ್ರುಗಳೊಡನೆ ಕಾದಾಡುವುದರಲ್ಲಿದೆ. ಈ ರೌದ್ರಧ್ಯಾನವು ಇನ್ನು ಒಂದು ಅಂತರ್ಮುಹೂರ್ತಕಾಲ ಮುಂದುವರೆದಲ್ಲಿ ಅವರಿಗೆ ನರಕಾಯುಷ್ಯ ಕಟ್ಟುತ್ತದೆ. ಆದ್ದರಿಂದ ನೀನು ಈಗಲೇ ಹೋಗಿ ಅವರ ಅಶುಭಪರಿಣಾಮವನ್ನು ನಿನ್ನ ಮಾತುಗಳಿಂದ ಹೋಗಲಾಡಿಸು"- ಎಂದು ನಿರೂಪಿಸಿದರು.

ಶ್ರೇಣಿಕನು ಧರ್ಮರುಚಿಗಳ ಬಳಿಗೆ ಹೋದನು, "ಮುನಿವರ! ದುರ್ಗತಿಗೆ ಕಾರಣವಾಗುವ ರೌದ್ರ ಧ್ಯಾನವನ್ನು ಬಿಡಿರಿ. ಸಂಕ್ಲೇಷ ಪರಿಣಾಮದಿಂದ ಆತ್ಮನ ಪ್ರಗತಿಯನ್ನು ಹಾಳುಮಾಡಿಕೊಳ್ಳಬೇಡಿ. ಸಂಬಂಧಗಳು ಸಂಸಾರವನ್ನು ಹೆಚ್ಚು ಮಾಡುತ್ತವೆ? ಯಾರು ಮಿತ್ರ? ಯಾರು ಶತ್ರು? ನಿಮಗೆ ನೀವೇ ಮಿತ್ರ-ಶತ್ರುಗಳು. ಆದ್ದರಿಂದ ಮೋಹ ಬಂಧನವನ್ನು ಹರಿದೊಗೆಯಿರಿ!" ಎಂದು ವಿನಯದಿಂದ ಮಧುರ ಮಾತಿನಿಂದ ಪ್ರತಿಬೋಧಿಸಿದನು.

ಈ ಮಾತಿನಿಂದ ಧರ್ಮರುಚಿಗಳ ಕಷಾಯ ಪರಿಣಾಮವು ನಷ್ಟವಾಯಿತು. ತಮ್ಮ ಮನಸ್ಸಿನ ಚಂಚಲತೆಗೆ ತಾವೇ ನಿಂದಿಸಿಕೊಂಡರು. ಮತ್ತೆ ದೃಢವಾದ

ಮನಸ್ಸಿನಿಂದ ಧ್ಯಾನದಲ್ಲಿ ಲೀನರಾದರು. ಶ್ರೇಣಿಕನು ಭಗವಂತರ ಬಳಿಗೆ ಹೋದನು. ಮುನಿವರರು ಎರಡುವರೆ ಘಳಿಗೆಯಲ್ಲಿ ಪರಿಶುದ್ಧ ಪರಿಣಾಮವನ್ನು ಹೊಂದಿದರು. ನಂತರ ಧ್ಯಾನದಲ್ಲಿ ಉತ್ಕೃಷ್ಟ ಸ್ಥಾನವನ್ನು ಸಾಧಿಸಿದರು. ಆತ್ಮ ಹಿತಕ್ಕೆ ಘಾತವುಂಟು ಮಾಡುವ ಕರ್ಮಗಳು ಕಳಚಿದುವು. ಕೇವಲಜ್ಞಾನ ಉದಯಿಸಿತು. ಧರ್ಮರುಚಿ ಜಿನೇಂದ್ರರನ್ನು ಇತರ ರಾಜರೊಡನೆ ಶ್ರೇಣಿಕನೂ ಬಂದು ಪೂಜಿಸಿದನು.

"ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಇನ್ನು ಮುಂದೆ ಯಾರು ಕೇವಲ ಜ್ಞಾನವನ್ನು ಪಡೆಯುವರು?" ಎಂದು ಶ್ರೇಣಿಕನು ಗೌತಮ ಗಣಧರರನ್ನು ಕೇಳಿದನು. ಅದೇ ಸಮಯಕ್ಕೆ ಅಲ್ಲಿಗೆ ಬ್ರಹ್ಮೇಂದ್ರನು ತನ್ನ ನಾಲ್ವರು ದೇವಿಯರೊಡನೆ ಸಮವಸರಣಕ್ಕೆ ಬಂದು ಜಿನೇಂದ್ರರಿಗೆ ವಂದಿಸಿಕುಳಿತನು. ಗಣಧರರು 'ಈ ವಿದ್ಯುನ್ಮಾಲಿಯೇ ಕೊನೆಯ ಕೇವಲಜ್ಞಾನಿ'- ಎಂದರು. 'ಇನ್ನು ಏಳುದಿನಕ್ಕೆ ಇವನು ಸ್ವರ್ಗದಿಂದ ಚ್ಯುತನಾಗಿ ಈ ನಗರದಲ್ಲಿಯೇ ಜಂಬೂಕುಮಾರನಾಗಿ ಹುಟ್ಟುವನು. ಚಿಕ್ಕಂದಿನಲ್ಲಿಯೇ ದೀಕ್ಷೆಧರಿಸಿ ಕೇವಲ ಜ್ಞಾನಿಯಾಗುವನು'- ಎಂದು ಅವನ ಮುಂದಿನ ಭವವನ್ನೂ ಹೇಳಿದರು.

ಶ್ರೇಣಿಕನ ಮಕ್ಕಳು, ಸೊಸೆಯರು, ಮೊಮ್ಮಕ್ಕಳು ಕೂಡಾ ಅವನ ಅಪ್ಪಣೆ ಪಡೆದೇ ತಪಸ್ವಿಗಳಾದರು. "ಮರದ ಹಸುರೆಲೆಗಳು ಹಣ್ಣಾಗಿ ಉದುರುವ ಹಾಗೆ ಮನುಷ್ಯನ ಜೀವನ. ಹುಲ್ಲಿನ ಮೇಲೆ ಬಿದ್ದ ಮಂಜಿನ ಹನಿಯಂತೆ ಈ ಬದುಕು. ಹೀಗಿರುವಾಗ ಮುಪ್ಪಿನವರೆಗೂ ಕಾಯದೆ ಶಕ್ತಿಯಿರುವಾಗಲೇ ತಪಸ್ಸಿಗೆ ತೊಡಗಬೇಕು". ಭಗವಾನರ ದಿವ್ಯವಾಣಿಯು ಜನರ ಶ್ರದ್ಧೆಯನ್ನು ಹೆಚ್ಚಿಸಿ ಆತ್ಮೋನ್ಮುಖರಾಗುವಲ್ಲಿ ಉತ್ಸಾಹವನ್ನು ತುಂಬುತ್ತಿತ್ತು. ಶ್ರೇಣಿಕನು ಸದಾಕಾಲವೂ ಸಮವಸರಣದಲ್ಲಿರಲು ಹಂಬಲಿಸುತ್ತಿದ್ದನು. ಆದರೂ ಮುನಿದೀಕ್ಷೆಯನ್ನು ಸ್ವೀಕರಿಸಲು ಸಮರ್ಥನಾಗಲಿಲ್ಲ. ತ್ಯಾಗ ಪ್ರವೃತ್ತಿಗೆ ಅವನ ಪೂರ್ವಕರ್ಮ ತಡೆಯಾಗಿತ್ತು.

ಸದಾಕಾಲವೂ ಸಮವಸರಣದಲ್ಲಿ ಇಲ್ಲವೇ ಧರ್ಮ ಚಿಂತನೆಯಲ್ಲಿ ಕಾಲಕಳೆಯುತ್ತ ರಾಜಕಾರಣವನ್ನು ಉದಾಸೀನ ಮಾಡಿದ. ಇದು ಅವನ ಮಗ ಕುಣಿಕನಿಗೆ ಅನುಕೂಲವಾಯಿತು. ಆತ ಮಹತ್ವಾಕಾಂಕ್ಷಿ! ತಾನೇ ಮಕುಟ ಬದ್ಧರಾಜನಾಗಬೇಕೆಂಬ ಅವನ ಆಸೆ ಬಲವಾಯಿತು. ಅವನೇ ರಾಜ್ಯಾಧಿಕಾರವನ್ನು ನಿರ್ವಹಿಸುತ್ತಿದ್ದರೂ ಅವನಿಗೆ ತೃಪ್ತಿಯಿಲ್ಲ. ಕೊನೆಗೆ ಕುಣಿಕ ವಂಚನೆಯಿಂದ ತನ್ನ ತಂದೆಯನ್ನೇ ಸೆರೆಯಿಟ್ಟು ಸಿಂಹಾಸನವನ್ನು ಏರಿ ತಾನೇ ರಾಜನೆಂದು ಘೋಷಿಸಿಕೊಂಡ.

ಶ್ರೇಣಿಕನಿಗೆ ಸೆರೆವಾಸಕ್ಕಿಂತಲೂ ಮಗನ ಚುಚ್ಚು ಮಾತುಗಳು ಅಸಹನೀಯವಾಗಿದ್ದುವು. "ಎಷ್ಟು ಸಲ ಸಮವಸರಣಕ್ಕೆ ಹೋಗಿ ಉಪದೇಶ ಕೇಳಿ ಏನು ಪ್ರಯೋಜನ ? ಮಕ್ಕಳು ಸನ್ಯಾಸಿಗಳಾದರೂ ನಿಮ್ಮ ವ್ಯಾಮೋಹ ಹೆಚ್ಚಿತಲ್ಲಾ !" ಎನ್ನುವನು. 'ಮರಣ ಯಾವ ರೀತಿ ಬರುವುದೋ ಯಾರಿಗೂ ಗೊತ್ತಿಲ್ಲ. ಆದುದರಿಂದ ಮನಸ್ಸನ್ನು ಶುದ್ಧವಾಗಿರಿಸಿಕೊಳ್ಳಬೇಕು!' ಎಂಬ ಮಹಾವೀರವಾಣಿ ಶ್ರೇಣಿಕನ ಮನಸ್ಸಿನಲ್ಲಿ ಮೊಳಗುತ್ತಿತ್ತು. ಆತ ಮಗನ ಕೆಡುಮಾತುಗಳಿಗೆ ಕಿವುಡಾಗಿಬಿಟ್ಟ!

ಇಷ್ಟಾದರೂ ಕುಣಿಕನಿಗೆ ತಾಯಿಯಲ್ಲಿ ಪ್ರೀತಿಯಿತ್ತು. ಆಕೆ, "ಅಪ್ಪಾ, ಮಗನೇ! ತಂದೆಗೆ ಎಂತಹ ಸನ್ಮಾನ ಮಾಡಿದೆಯಪ್ಪಾ! ನನ್ನನ್ನೂ ಅವರ ಜೊತೆ ಸೇರಿಸಿಬಿಡು" ಎಂದು ಪರಿಪರಿಯಾಗಿ ಕೇಳಿಕೊಂಡಳು.

ಕುಣಿಕ 'ತಾನು ಅತಿಯಾಸೆಗೆ ಬಲಿಯಾದನೇ ?' ಎಂದುಕೊಂಡ, ಶ್ರೇಣಿಕನ ವ್ಯಕ್ತಿತ್ವದ ಮುಂದೆ ಕುಣಿಕ ಗೌಣವಾಗಿದ್ದ. ವೃದ್ಧ ತಂದೆಯಲ್ಲಿ ವಿರಕ್ತಿ ಮೂಡಿರಲಿಲ್ಲ. ಕುಣಿಕನ ಪಟ್ಟದ ಆಸೆ ತೀರಿರಲಿಲ್ಲ.

"ನಾವಿಬ್ಬರೂ ಸಮವಸರಣಕ್ಕೆ ಹೋಗಿ ಬಿಡುತ್ತೇವೆ. ಅವರನ್ನು ಬಿಟ್ಟು ಬಿಡು!" ಎಂದು ತಾಯಿಯ ಮಾತು ಅವನಲ್ಲಿ ಪಶ್ಚಾತ್ತಾಪ ಮೂಡಿಸಿತ್ತು. ತಂದೆಯನ್ನು ತಾನೇ ಕರೆತರಬೇಕೆಂದು ಹೊರಟ.

ಸೆರೆಮನೆಯ ಬಳಿ ಬರುತ್ತಿದ್ದಂತೆಯೇ ಶ್ರೇಣಿಕನ ಪ್ರಾರ್ಥನೆ ಕೇಳಿಸುತ್ತಿತ್ತು. "ಆತ್ಮನನ್ನು ಯಾವ ಶಸ್ತ್ರವೂ ಘಾತಿಸದು. ಬೆಂಕಿಯು ಸುಡದು, ನೀರು ನೆನೆಸಲಾರದು. ತನ್ನ ಸ್ವಭಾವವಾದ ಜ್ಞಾನ-ಚೈತನ್ಯ ಲೀನನು, ಆತ್ಮ!"

"ಮೃತ್ಯುರೂಪವಾದ ಮಹೋತ್ಸವವು ಪ್ರಾಪ್ತವಾದಾಗ ಯಾವುದರಿಂದ ತಾನೇ ಭಯ? ಮೃತ್ಯುವು ಕಲ್ಪವೃಕ್ಷ. ಜೀವಿಯ ಕಲ್ಯಾಣವು ಶರೀರದ ಮೇಲಿನ ಮಮತ್ವವನ್ನು ಬಿಡುವುದರಲ್ಲಿದೆ."

ದೂರದಲ್ಲಿರುವಾಗಲೇ ಘಂಟಾನಾದದಂತೆ ಕೇಳಿಬರುತ್ತಿದ್ದ ನುಡಿಗಳು ಕುಣಿಕ ಹತ್ತಿರ-ಹತ್ತಿರವಾಗುತ್ತಿದ್ದ ಹಾಗೆಲ್ಲಾ ಮೆಲುವಾಗುತ್ತಾ ಆಗುತ್ತಾ, ಅವನು ಒಳಗೆ ಬಂದಾಗ ನಿಂತೇ ಹೋಗಿತ್ತು !

ತನ್ನ ಕಾರಣದಿಂದಲೇ ತಂದೆ ಮೃತ್ಯುವಶರಾದರೆಂಬ ಅಪರಾಧೀ ಪ್ರಜ್ಞೆಯಿಂದ ಕುಸಿದು ಹೋದ ಕುಣಿಕ.

●